KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಸೆಪ್ಟೆಂಬರ್ ೨, ೨೦೧೦ (ಭಾದ್ರಪದ ೧೧, ಶಕ ವರ್ಷ ೧೯೩೨)	ಸಂಚಿಕೆ ೩೫

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

COMMERCE & INDUSTRIES SECRETARIAT

Sub :- Approval to the Project Proposal of M/s BELL Ceramics Pvt. Ltd., to establish a unit for manufacture of "Ceramics Glazed Tiles (Expansions of capacity from the Existing 20,000 m2 to 30,000 m2 per day) at Chokkahalli Village, Hoskote Taluk Bangalore Rural District.

Read :- Proceedings of the 22nd State High Level Clearance Committee (SHLCC) meeting held on 24-05-2010.

Preamble:

M/s BELL Ceramics Pvt. Ltd., proposes to establish a unit for manufacture of "Ceramic Glazed Tiles (Expansion of capacity from the Existing 20,000 m2 to 30,000 m2 per day) at Chokkahalli Village, Hoskote Taluk, Bangalore Rural District, with an investment of Rs. 60 crores, generating employment to about 140 persons.

In the 22nd State High Level Clearance Committee (SHLCC) meeting held on 24-05-2010, the proposal of Company has been approved.

Government has examined the recommendations made by the State High Level Clearance Committee in the 22nd meeting held on 24-05-2010, in all aspects.

Hence the following Order.

Government Order No. CI 227 SPI 2010, Bangalore, dated : 02-06-2010

Government is pleased to accord in principle approval to the project proposal of M/s Om Sri Sai Energy Ltd., to establish a unit for manufacture of "Ceramic Glazed Tiles (Expansion of capacity from the Existing 20,000 m2 to 30,000 m2 per day) at Chokkahalli Village, Hoskote Taluk, Bangalore Rural District, with an investment of Rs. 60 crores, generating employment to about 140 persons and extend the following infrastructure facilities, incentives and concessions.

Infrastructure Facilities :-

1. **Land:** 35 acres - existing land of Chokkahalli village, Hoskote Taluk, Bangalore Rural District.
2. **Water:** 300 KLD of Secondary/Tertiary Treated Water from BWSSB subject to availability.
3. **Power :** 1500 KVA to be serviced by BESCOM.
4. **Incentives and Concessions**: As per applicable Industrial Policy of the State.

General Terms And Conditions:

1. **MOU:** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.

3. **Employment:** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development:** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development**: The Company is advised to take up social infrastructure development projects in the vicinity of the proposed location of the unit. A copy of such projects shall be sent to the Commisioner for I.D. & Director of Industries and Commerce for monitoring.
6. **Others :**

   a) The project proponents shall adopt rain water harvesting, waste water ecycling and water conservation techniques. Zero discharge facility should be adopted wherever applicable.

   b) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

   This approval is valid for a period of two years from the date of issue.

By Order and in the name of the Governor of Karnataka
(**Aparna Pavate)**
Desk Officer (Technical cell)
Commerce and Industries Department

P.R. 1458

COMMERCE & INDUSTRIES SECRETARIAT

Sub :- Approval to the Project Proposal of M/s CF Biomass PVt. Ltd., to establish a "10 MW Biomass Based Multi Feed Power Plant" at a suitable location in Shimoga District.

Read :- Proceedings of the 22nd State High Level Clearance Committee (SHLCC) meeting held on 24-05-2010.

Preamble:

M/s CF Biomass Pvt. Ltd., proposes to establish a "10 MW Biomass Based Multi Feed Power Plant" at a suitable location in Shimoga District, with an investment of Rs. 79.07 crores, generating employment to about 75 persons.

In the 22nd State High Level Clearance Committee (SHLCC) meeting held on 24-05-2010, the proposal of Company has been approved.

Government has examined the recommendations made by the State High Level Clearance Committee in the 22nd meeting held on 24-05-2010, in all aspects.

Hence the following Order.

Government Order No. CI 223 SPI 2010, Bangalore, dated : 02-06-2010

Government is pleased to accord in principle approval for the project proposal of M/s CF Biomass Pvt. Ltd., to establish a "10 MW Biomass Based Multi Feed Power Plant" at a suitable location in Shimoga District, with an investment of Rs. 79.07 crores, generating employment to about 75 persons and extend the following infrastructure facilities, incentives and concessions.

Infrastructure Facilities :-

1. **Land:** 60 acres - at a suitable location in Shimoga District U/s 109 of KLR Act and conversion of the same to industrial use.
2. **Water:** 1.512 MLD of water from nearest water source, subject to approval of the Water Resources Department.
3. **Power :** 33 KVA to be serviced by MESCOM.

4. **Incentives and Concessions**: As per applicable Industrial Policy of the State.

General Terms And Conditions:

1. **MOU:** The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment:** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development:** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development**: The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**

   a) The project proponents shall adopt rain water harvesting, waste water ecycling and water conservation techniques. Zero discharge facility should be adopted wherever applicable.

   b) The promoters shall take all statutory and other necessary clearances from the competent authorities including GOI and shall submit milestones/progress in implementation of the project shall regularly, which will be monitored by the Department.

   This approval is valid for a period of two years from the date of issue.

By Order and in the name of the Governor of Karnataka

(**Aparna Pavate)**

P.R. 1459

Desk Officer (Technical cell)

Commerce and Industries Department

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ವೆಂಕಟಸ್ವಾಮಿ, ಪಿ.ಸಿ.–2394, ವಿಜಯನಗರ ಪೋಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗ, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ : ಡಿಇ/ಆರ್–7/83/ಡಿಸಿಪಿ/ಪ/06, ದಿನಾಂಕ 15–02–2007.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೋಲೀಸ್ ಆಯುಕ್ತರು (ಆಡಳಿತ) ಬೆಂಗಳೂರು ನಗರ ಇವರ ಆದೇಶ ಸಂಖ್ಯೆ : 19/ಅಪೀಲು/2009, ದಿನಾಂಕ 26–8–09.
3. ಅರ್ಜಿದಾರರುಗಳ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 17–9–09.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಅಪೀಲು (2) 45/2009–10, ದಿನಾಂಕ 08–02–2010.

ಪ್ರಸ್ತಾವನೆ :

ಶ್ರೀ ವೆಂಕಟಸ್ವಾಮಿ, ಪಿ.ಸಿ.–2394, ವಿಜಯನಗರ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ದುರ್ನಡತೆ ಹಾಗೂ ಅಶಿಸ್ತು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ

ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ :

> "ಶ್ರೀ ವೆಂಕಟಸ್ವಾಮಿ, ಪಿ.ಸಿ.–2394, ವಿಜಯನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೀರಿ. ನಿಮ್ಮನ್ನು ದಿನಾಂಕ 06–12–06 ರಂದು ರಾತ್ರಿ 5ನೇ ಬೀಟಿನ ಗಸ್ತು ಕರ್ತವ್ಯಕ್ಕೆ ಪಿ.ಐ., ರವರು ನೇಮಕ ಮಾಡಿರುತ್ತಾರೆ. ದಿನನಿತ್ಯ ಹಗಲು ಮತ್ತು ರಾತ್ರಿ ಪಾಳಿಯವರನ್ನು ಕರ್ತವ್ಯಕ್ಕೆ ನೇಮಿಸುವ ಸಮಯದಲ್ಲಿ ಪಿ.ಐ., ರವರು ಎಲ್ಲಾ ಸೂಚನೆಗಳನ್ನು ನೀಡಿ ಕಳುಹಿಸುವುದಲ್ಲದೆ, ಕರ್ತವ್ಯದಲ್ಲಿ ಮದ್ಯಪಾನ ಮಾಡುವುದು, ಧೂಮಪಾನ ಮಾಡುವುದು ಹಾಗೂ ಇತರೆ ಕೆಟ್ಟ ಚಟಗಳಲ್ಲಿ ತೊಡಗಬಾರದೆಂದು ಸೂಚನೆಗಳನ್ನು ನೀಡಿದ್ದರೂ ಸಹ, ನೀವು ಸೂಚನೆಗಳನ್ನು ಉಲ್ಲಂಘಿಸಿ ದಿನಾಂಕ 6–12–06 ರಂದು ರಾತ್ರಿ 8–30 ಗಂಟೆಯಲ್ಲಿ ಕರ್ತವ್ಯಕ್ಕೆ ನೇಮಕ ಮಾಡಿದ ನಂತರ ಮದ್ಯಪಾನ ಸೇವಿಸಿರುವುದು ಕಂಡುಬಂದಿರುತ್ತದೆ. ನೀವು ಈ ಇಲಾಖೆಯ ಶಿಸ್ತು ನಿಯಮಗಳನ್ನು ತಿಳಿದುಕೊಂಡಿದ್ದರೂ ಸಹ, ಮೇಲಾಧಿಕಾರಿಯವರ ಸೂಚನೆಗಳನ್ನು ಉಲ್ಲಂಘಿಸಿ ಕರ್ತವ್ಯದಲ್ಲಿ ಮದ್ಯಸೇವನೆ ಮಾಡಿ, ದುರ್ನಡತೆ ಹಾಗೂ ಅಶಿಸ್ತಿನಿಂದ ವರ್ತಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಉಪ ಪೊಲೀಸ್ ಆಯುಕ್ತರು, ಪಶ್ಚಿಮ ವಿಭಾಗ, ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ 15–02–2007 ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು 4 ತಿಂಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಮುಂದೂಡಲಾಗಿದೆ. ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಅಡಿಷನಲ್ ಪೊಲೀಸ್ ಆಯುಕ್ತರು (ಆಡಳಿತ), ಬೆಂಗಳೂರು ನಗರ, ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 26–08–09ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡುಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ : ಒಇ 169 ಪೊಸಿಅ 2009, ಬೆಂಗಳೂರು, ದಿನಾಂಕ : 27–05–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ವೆಂಕಟಸ್ವಾಮಿ, ಪಿ.ಸಿ.–2394, ವಿಜಯನಗರ ಪೊಲೀಸ್ ಠಾಣೆ, ಬೆಂಗಳೂರು ನಗರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
(ಟಿ.ಎನ್. ರವಿಪ್ರಕಾಶ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಪಿ.ಆರ್. 1361

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ವಿ.ಎಲ್. ರಮೇಶ್, ಪಿ.ಐ, ರಾಬರ್ಟ್‌ಸನ್ ಪೇಟೆ ವೃತ್ತ, ಕೆ.ಜಿ.ಎಫ್., ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಆದೇಶ ಸಂಖ್ಯೆ : ಪನ್ಸಿ/09/ಡಿಇ/2008–09, ಓಬಿ/126/2008–09, ದಿನಾಂಕ 31.03.2009.
2. ಮೇಲ್ಮನವಿ ಪ್ರಾಧಿಕಾರಿ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ : ಸಿಬಿ(8) 33/2009–10, ದಿನಾಂಕ 01–08–2009.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 27–10–09.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಸಿಬಿ(8) 33/2009–10, ದಿನಾಂಕ 12–01–2010.

ಪ್ರಸ್ತಾವನೆ :

ಶ್ರೀ ವಿ.ಎಲ್. ರಮೇಶ್, ಪಿ.ಐ., ಇವರು ಕೋಲಾರ ಗ್ರಾಮಾಂತರ ವೃತ್ತದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ :

"ಕೋಲಾರ ತಾಲ್ಲೂಕು ಕಸಬಾ ಹೋಬಳಿಯ ಅರಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳಾದ ಬಾರೆಂಡಹಳ್ಳಿ, ಅಂಬೇಡ್ಕರ್ ನಗರಗಳಲ್ಲಿ ವರ್ತೂರು ಜಿಲ್ಲಾ ಪಂಚಾಯ್ತಿ ಕ್ಷೇತ್ರದ ಜಿಲ್ಲಾ ಪಂಚಾಯ್ತಿ ಸದಸ್ಯರಾದ ಶ್ರೀ ಆರ್. ವರ್ತೂರು ಪ್ರಕಾಶ್‌ರವರು ದಿನಾಂಕ 09–04–2008 ರಂದು ಚುನಾವಣಾ ಪ್ರಚಾರ ಕೈಗೊಂಡಿದ್ದು, ಸದರಿ ಗ್ರಾಮದ ಮತದಾರರಿಗೆ ಹಾಗೂ ಸ್ತ್ರೀಶಕ್ತಿ ಸಂಘಗಳಿಗೆ ಹಣ ಹಾಗೂ ಇತರೆ ವಸ್ತುಗಳನ್ನು ವಿತರಿಸಲು ಸಜ್ಜಾಗಿರುತ್ತಾರೆಂದು, ಅರಹಳ್ಳಿ ಗ್ರಾಮದ ಪಂಚಾಯ್ತಿ ಸದಸ್ಯರಾದ ಶ್ರೀಮತಿ ಎಸ್.ಮಂಜುಳಾ ಇವರು ದಿನಾಂಕ 08–04–2008 ರಂದು ನೀಡಿರುವ ದೂರಿನ ಮೇರೆಗೆ ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿರುವ ಮೇರೆಗೆ ಅಂದು ಬೆಳಿಗ್ಗೆ 9–30 ಗಂಟೆ ಸಮಯದಲ್ಲಿ ಚುನಾವಣಾಧಿಕಾರಿಗಳು ಸಮತ್ತು ರಾಜ್ಯಸ್ವ ನಿರೀಕ್ಷಕರು, ಗ್ರಾಮ ಲೆಕ್ಕಿಗರು ಹಾಗೂ ಆರಕ್ಷಕ ವೃತ್ತ ನಿರೀಕ್ಷಕರು ಗ್ರಾಮಾಂತರ ಠಾಣೆ ಮತ್ತು ನಿಮ್ಮ ಸಿಬ್ಬಂದಿಯೊಂದಿಗೆ ಹೊದಲವಾಡಿ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಶ್ರೀ ಆರ್. ವರ್ತೂರು ಪ್ರಕಾಶ್‌ರವರ ಬೆಂಬಲಿಗರು ಸದರಿ ಗ್ರಾಮದಲ್ಲಿ ಶ್ಯಾಮಿಯಾನ ಹಾಕಿ, ಚುನಾವಣಾ ಪ್ರಚಾರದ ಸಿದ್ದತೆಯಲ್ಲಿದ್ದಾಗ ಸ್ಥಳಕ್ಕೆ ಭೇಟಿ ನೀಡಿ ವಿಚಾರಿಸಲಾಗಿ ಶ್ರೀ ಆರ್. ವರ್ತೂರು ಪ್ರಕಾಶ್‌ರವರು ಚುನಾವಣಾ ಪ್ರಚಾರ ಕೈಗೊಳ್ಳಲು ಬರಲಿದ್ದು, ಸಭೆ ಏರ್ಪಡಿಸಲಾಗಿದೆ ಎಂದು ಹಾಗೂ ಸಭೆಗಳಲ್ಲಿ ಕೆಲವು ಸ್ತ್ರೀಶಕ್ತಿ ಸಂಘಗಳಿಗೆ ಸಹಾಯ ಧನ ವಿತರಣೆ ಮಾಡುವುದು ಮತ್ತು ಇತರೆ ಕಾರ್ಯಗಳು ಇರುವುದಾಗಿ ಗ್ರಾಮಸ್ಥರು ತಿಳಿಸಿರುತ್ತಾರೆ.

ಚುನಾವಣಾ ನೀತಿ ಸಂಯಿತೆ ಜಾರಿಯಲ್ಲಿದ್ದರೂ ಶ್ರೀ ಆರ್. ವರ್ತೂರು ಪ್ರಕಾಶ್‌ರವರು ಮತ್ತು ಅವರ ಬೆಂಬಲಿಗರು ಸಂಬಂಧಿಸಿದ ಪ್ರಾಧಿಕಾರ ಪೂರ್ವಾನುಮತಿಯನ್ನು ಪಡೆಯದೆ ಕಟ್‌ಔಟ್‌ಗಳನ್ನು ಹಾಕಿ, ಚುನಾವಣಾ ಪ್ರಚಾರ ಕೈಗೊಂಡಿರುವುದು ಚುನಾವಣಾ ನೀತಿ ಸಂಯಿತೆಯ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ಸದರಿ ಚುನಾವಣಾ ಪ್ರಚಾರಕ್ಕೆ ಉಪಯೋಗಿಸಿದ ಕಟ್‌ಔಟ್‌ಗಳನ್ನು ಚುನಾವಣಾ ಸಹಾಯಕ ಆಯುಕ್ತರು ವಶಪಡಿಸಿಕೊಂಡು ಹಾಗೂ ಕಟ್‌ಔಟ್‌ಗಳ ಸಾಗಾಣಿಕೆಗೆ ಉಪಯೋಗಿಸಿದ ಕೆಎ–07–6177 ರ ಸಂಖ್ಯೆಯ ವಾಹನವನ್ನು ವಶಪಡಿಸಿಕೊಂಡು ಪೊಲೀಸ್ ಸ್ವಾಧೀನಕ್ಕೆ ನೀಡಲಾಗಿದೆ. ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವ ಸಮಯದಲ್ಲಿ ಅಲ್ಲಿದ್ದವರಿಂದ ದೊರೆತಿರುವ ಮಾಹಿತಿಯಂತೆ ಶ್ರೀ ಆರ್. ವರ್ತೂರು ಪ್ರಕಾಶ್‌ರವರು ಅಂಬೇಡ್ಕರ್ ನಗರದ ಶ್ರೀ ಶನಿಮಹಾತ್ಮ ದೇವಸ್ಥಾನಕ್ಕೆ ಅಭಿವೃದ್ಧಿಗಾಗಿ ಮತ್ತು ಸ್ತ್ರೀಶಕ್ತಿ ಸಂಘಗಳಿಗೆ ಹಣ ನೀಡುವ ಕಾರ್ಯಕ್ರಮವಿದ್ದು ಸ್ಪಷ್ಟವಾಗಿದ್ದು, ಈ ಬಗ್ಗೆ ವ್ಯಾಪ್ತಿಯ ಠಾಣಾ ವೃತ್ತ ನಿರೀಕ್ಷಕರಾದ ನೀವು ಸ್ಥಳಕ್ಕೆ ಭೇಟಿ ನೀಡಿ ಚುನಾವಣಾ ನೀತಿ ಸಂಯಿತೆ ಉಲ್ಲಂಘನೆಯಾಗಿರುವ ಬಗ್ಗೆ ಸ್ಪಷ್ಟವಾದ ಕೂಡಲೇ ಸ್ವತಃ ವರದಿಯನ್ನು ಜೊತೆಯಲ್ಲಿದ್ದ ಸಿಬ್ಬಂದಿಯವರ ಮುಖೇನ ಠಾಣೆಗೆ ರವಾನಿಸಿ ಕೇಸು ದಾಖಲಿಸಬಹುದಾಗಿತ್ತು. ಆದರೆ ನೀವು ಆ ರೀತಿ ಕರ್ತವ್ಯ ಮಾಡದೆ ಚುನಾವಣಾಧಿಕಾರಿಗಳು ಕೇಂದ್ರ ಸ್ಥಾನಕ್ಕೆ ವಾಪಸಾಗಿ ಚುನಾವಣಾ ನೀತಿ ಸಂಯಿತೆ ಉಲ್ಲಂಘನೆಯಾಗಿರುವ ಬಗ್ಗೆ ಪೋಲೀಸ್ ಠಾಣೆಗೆ

ದೂರು ಸಲ್ಲಿಸುವವರೆಗೂ ಈ ಸಂಬಂಧ ಯಾವುದೇ ಪ್ರಕರಣವನ್ನು ದಾಖಲಿಸಲು ಕ್ರಮ ಕೈಗೊಳ್ಳದೆ, ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷತೆ, ಉದಾಸೀನತೆ, ಬೇಜವಾಬ್ದಾರಿತನ ತೋರ್ಪಡಿಸಿರುವುದು ಕಂಡು ಬರುತ್ತದೆ. ಕೇಸುಗಳು ದಾಖಲಿಸಿದ ನಂತರ ತನಿಖೆಯ ಮೇಲ್ವಿಚಾರಣೆ ಮಾಡಿಸಿ ತನಿಖಾಧಿಕಾರಿಗಳಾದ ಪಿಎಸ್ಐ, ಕೋಲಾರ ಗ್ರಾಮಾಂತರ ಠಾಣೆಯವರಿಗೆ ಆರೋಪಿಗಳ ದಸ್ತಗಿರಿಗೆ ಮತ್ತು ಮುಂದಿನ ತನಿಖೆಯ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವಲ್ಲಿ ವಿಫಲರಾಗಿದ್ದೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಕೇಂದ್ರ ವಲಯ, ಬೆಂಗಳೂರು, ಇವರ ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ 31–03–2009 ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಬೀರದಂತೆ 6 ತಿಂಗಳ ಕಾಲ ತಡೆಯಿಡಿಯುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 01–08–09ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡುಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ : ಒಇ 195 ಪೊಸಿಅ 2009, ಬೆಂಗಳೂರು, ದಿನಾಂಕ : 27–05–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ವಿ.ಎಲ್. ರಮೇಶ್, ಪಿ.ಐ, ರಾಬರ್ಟ್‌ಸನ್ ಪೇಟೆ ವೃತ್ತ, ಕೆ.ಜಿ.ಎಫ್., ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ಪಿ.ಆರ್. 1362

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಬಿ.ಎನ್. ಕೃಷ್ಣಮೂರ್ತಿ, ಪೊಲೀಸ್ ಇನ್ಸ್‌ಪೆಕ್ಟರ್, ಡಿ.ಸಿ.ಐ.ಬಿ. ಶಾಖೆ, ಜಿಲ್ಲಾ ಪೊಲೀಸ್ ಕಛೇರಿ, ಚಿಕ್ಕಬಳ್ಳಾಪುರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಶಿಸ್ತು ಪ್ರಾಧಿಕಾರಿ ಹಾಗೂ ಪೋಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಆದೇಶ ಸಂಖ್ಯೆ : ಡಿಇ(2)/61/ಆರ್–7/09, ದಿನಾಂಕ 20–03–2009.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ : ಸಿಬಿ(8) 13/2009–10, ದಿನಾಂಕ 09–09–2009.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ 18–11–09.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ : ಸಿಬಿ(8) 13/2009–10, ದಿನಾಂಕ –03–2010.

ಪ್ರಸ್ತಾವನೆ :

ಶ್ರೀ ಬಿ.ಎನ್. ಕೃಷ್ಣಮೂರ್ತಿ, ಪೊಲೀಸ್ ಇನ್ಸ್‌ಪೆಕ್ಟರ್, ಡಿ.ಸಿ.ಐ.ಬಿ. ಶಾಖೆ, ಚಿಕ್ಕಬಳ್ಳಾಪುರ, ಇವರು ಬೆಂಗಳೂರಿನ ರಾಮಮೂರ್ತಿ ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಬೇಜವಾಬ್ದಾರಿತನ ಎಸಗಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೋಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 7ರಡಿ ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ :

"ಶ್ರೀ ಬಿ.ಎನ್. ಕೃಷ್ಣಮೂರ್ತಿ, ಪೊಲೀಸ್ ಇನ್ಸ್‌ಪೆಕ್ಟರ್, ರಾಮಮೂರ್ತಿ ನಗರ ಪೊಲೀಸ್ ಠಾಣೆ, ಬೆಂಗಳೂರು ನಗರ ಆದ ನೀವು ಪ್ಯಾಲೆಸ್ತೀನ್ ರಾಷ್ಟ್ರೀಯರಾದ Mr. Mohamed Almani ರವರ ವಾಸ ವಿಸ್ತರಣೆಗೆ ಸಂಬಂಧಪಟ್ಟಂತೆ ನಿಮ್ಮ ಪರಿಶೀಲನಾ ವರದಿ ಪತ್ರ No. RMPS/SBFR/55/2008, Dated 2.7.2008 ರಲ್ಲಿ ಇವರು ಕಳೆದ 6 ತಿಂಗಳಿನಿಂದ ಶ್ರೀಮತಿ ಮೆಹರಾ ಕಾಲೇಜು, ಫ್ರೇಜರ್ ಟೌನ್, ಬೆಂಗಳೂರು, ಇಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ ಎಂದು ತಿಳಿಸಿರುತ್ತೀರಿ. ಈ ಬಗ್ಗೆ ರಾಜ್ಯ ಗುಪ್ತವಾರ್ತೆಯಿಂದ ಪರಿಶೀಲಿಸಲಾಗಿ ಸದರಿ ವಿದ್ಯಾರ್ಥಿಯು ಕಾಲೇಜಿಗೆ ಬರದೇ ಮೂಲ ದಾಖಲಾತಿಗಳು ಒದಗಿಸದೇ ಇರುವ ಕಾರಣ ಈತನ ನೋಂದಣಿಯನ್ನು ವಜಾ ಮಾಡಿರುವುದು ತಿಳಿದು ಬಂದಿರುತ್ತದೆ. ಈ ರೀತಿಯಾಗಿ ಒಬ್ಬ ಜವಾಬ್ದಾರಿಯುತ ಠಾಣಾಧಿಕಾರಿಯದ ನೀವು ವಿದೇಶಿಯರ ವಾಸಸ್ಥಳದ ಬಗ್ಗೆ ಕೂಲಂಕಷವಾದ ಪರಿಶೀಲನೆ ಮಾಡದೇ ತಪ್ಪು ಮಾಹಿತಿ ನೀಡಿ ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಬೇಜವಾಬ್ದಾರಿತನ ಮತ್ತು ಕರ್ತವ್ಯ ಲೋಪವೆಸಗಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಆಯುಕ್ತರು, ಬೆಂಗಳೂರು ನಗರ, ಇವರ ಮೇಲೆ ಕ್ರಮ ಸಂಖ್ಯೆ : (1) ರಲ್ಲಿ ಓದಲಾದ ದಿನಾಂಕ 20-03-2009 ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಮೂರು ವರ್ಷಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಎರಡು ವರ್ಷಗಳ ಕಾಲ ಮುಂದೂಡುವ ದಂಡನೆಯನ್ನು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ದಿನಾಂಕ 09-09-20009ರಲ್ಲಿ ವಿಧಿಸಿ ಆದೇಶಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ : ಒಇ 206 ಪೊಸಿಅ 2009, ಬೆಂಗಳೂರು, ದಿನಾಂಕ : 27-05-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೋಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಬಿ.ಎನ್. ಕೃಷ್ಣಮೂರ್ತಿ, ಪೊಲೀಸ್ ಇನ್ಸ್‌ಪೆಕ್ಟರ್, ಡಿ.ಸಿ.ಐ.ಬಿ. ಶಾಖೆ, ಚಿಕ್ಕಬಳ್ಳಾಪುರ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಪೋಲೀಸ್ ಸೇವೆಗಳು).

ಪಿ.ಆರ್. 1363

ಸಹಕಾರ ಸಚಿವಾಲಯ

ವಿಷಯ : ಸಹಕಾರಿ ಸಂಸ್ಥೆಗಳಿಂದ ರೈತರು ಪಡೆದಿರುವ ಕೃಷಿ ಸಾಲಗಳನ್ನು ಮನ್ನಾ ಮಾಡುವ ಬಗ್ಗೆ.

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ ಸಿಒ 50 ಸಿಎಲ್‌ಎಸ್ 2007, ದಿನಾಂಕ 16-04-2007.
2. ಸರ್ಕಾರಿ ಆದೇಶ ಸಂಖ್ಯೆ ಸಿಒ 50 ಸಿಎಲ್‌ಎಸ್ 2007, ದಿನಾಂಕ 15-05-2007.
3. ಸಹಕಾರ ಸಂಘಗಳ ನಿಬಂಧಕರ ಪತ್ರಸಂಖ್ಯೆ : ಸಿಆರ್‌ಡಿ/ಕೆಆರ್‌ಎಫ್-2/03/2007-08, ದಿನಾಂಕ : 10-08-2008 ಮತ್ತು 08-01-2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ದಿನಾಂಕ 01-02-2006 ರಿಂದ ಈಚೆಗೆ ರೂ.50,000/- ಗಳವರೆಗೆ ಬೆಳೆ ಸಾಲ ಪಡೆದಿರುವ ಮತ್ತು ದಿನಾಂಕ 31-12-2006 ರವರೆಗೆ ಬಾಕಿ ಉಳಿಸಿಕೊಂಡಿರುವ ಎಲ್ಲಾ

ರೈತರಿಗೂ ರೂ.25,000/– ಗಳಿಗಿಂತ ಹೆಚ್ಚಿನ ಸಾಲದ ಮೊತ್ತವನ್ನು ಬಡ್ಡಿರಹಿತವಾಗಿ ಮರುಪಾವತಿ ಮಾಡಲು ದಿನಾಂಕ 30.04.2007 ರವರೆಗೆ ಅವಧಿಯನ್ನು ನಿಗದಿಪಡಿಸಲು ಹಾಗೂ ಈ ರೀತಿ ಮನ್ನಾ ಮಾಡಿದ ಮೊತ್ತವನ್ನು ಸಹಕಾರಿ ಸಂಸ್ಥೆಗಳಿಗೆ ಭರಿಸಿಕೊಡಲು ಕೆಲವು ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ. ಮೇಲೆ ಓದಲಾದ (2)ರ ಆದೇಶದಲ್ಲಿ ದಿನಾಂಕ 01–01–2006 ರಿಂದ ದಿನಾಂಕ 31–12–2006 ರವರೆಗೆ ಬೆಳೆ ಸಾಲ ಪಡೆದಿರುವ ಎಲ್ಲ ರೈತರಿಗೂ (ಸಾಲದ ಮೊತ್ತ ಎಷ್ಟೇ ಇದ್ದರೂ) ರೂ.25,000/– ಗಳವರೆಗಿನ ಸಾಲವನ್ನು ಬಡ್ಡಿ ಸಹಿತ ಮನ್ನಾ ಮಾಡಲು ಮತ್ತು ರೂ. 25,000/– ಗಳಿಗಿಂತ ಹೆಚ್ಚಿನ ಸಾಲದ ಮರುಪಾವತಿ ಅವಧಿಯನ್ನು ದಿನಾಂಕ 31–05–2007 ರವರೆಗೆ ವಿಸ್ತರಿಸಲು ಮಂಜೂರಾತಿ ನೀಡಲಾಗಿದೆ.

ಮೇಲೆ ಓದಲಾದ (3) ರ ಪತ್ರದಲ್ಲಿ ಸಹಕಾರ–ಸಂಘಗಳ ನಿಬಂಧಕರು 2006–07 ರ ಸಾಲ ಮನ್ನಾ ಯೋಜನೆಯಡಿ ದಿನಾಂಕ 31–03–2009ರ ಆದೇಶದ ಅಡಿ ಬಿಡುಗಡೆ ಮಾಡಿರುವ ರೂ.5000.00 ಲಕ್ಷಗಳ ಪೈಕಿ ಡಿಸಿಸಿ ಬ್ಯಾಂಕುಗಳು ಹಾಗೂ ವಾಣಿಜ್ಯ ಬ್ಯಾಂಕುಗಳಿಗೆ ಅಧ್ಯರ್ಪಿತವಾಗಿರುವ ಫ್ಯಾಕ್ಸ್‌ಗಳಿಗೆ ಬಾಕಿ ಇರುವ ಕ್ಲೇಮುಗಳನ್ನು ಬಿಡುಗಡೆ ಮಾಡಲಾಗಿರುತ್ತದೆಂದೂ ಪ್ರಸ್ತುತ ಅಪೆಕ್ಸ್ ಬ್ಯಾಂಕಿನ ಸರ್ಕಾರದ ಅನುದಾನಿತ ಖಾತೆಯಲ್ಲಿ ರೂ.1174.02 ಲಕ್ಷಗಳ ಶಿಲ್ಕು ಇರುತ್ತದೆಂದೂ ಈ ಯೋಜನೆ ಪ್ರಕಾರ ರೂ.5263.66 ಲಕ್ಷಗಳು ಖಜಾನೆಯಲ್ಲಿ ಠೇವಣಿಸಬೇಕಾದ ಕ್ಲೇಮು ಇರುತ್ತದೆಂದೂ ಹಾಲಿ ಅಪೆಕ್ಸ್ ಬ್ಯಾಂಕಿನಲ್ಲಿರುವ ರೂ. 1174.02 ಲಕ್ಷಗಳನ್ನು ಹೊರತುಪಡಿಸಿದರೆ ಇನ್ನೂ ರೂ.4089.64 ಲಕ್ಷಗಳ ಅವಶ್ಯಕತೆ ಇರುತ್ತದೆಂದೂ ತಿಳಿಸಿ 2009–10ನೇ ಸಾಲಿನಲ್ಲಿ ಸದರಿ ಯೋಜನೆಗೆ ಆಯವ್ಯಯದಲ್ಲಿ ಕಲ್ಪಿಸಿರುವ ಅನುದಾನ ರೂ.5000.00 ಲಕ್ಷಗಳ ಪೈಕಿ ರೂ.4089.64 ಲಕ್ಷಗಳನ್ನು ಒದಗಿಸುವಂತೆಯೂ ಹಾಗೂ ಪ್ರಸ್ತುತ ಅಪೆಕ್ಸ್ ಬ್ಯಾಂಕಿನಲ್ಲಿರುವ ರೂ.1174.02 ಲಕ್ಷಗಳನ್ನು ಉಪಯೋಗಿಸಿಕೊಳ್ಳಲು ಅನುಮತಿಯನ್ನು ಕೋರಿದ್ದಾರೆ. ಸದರಿ ಕೋರಿಕೆಯನ್ನು ಪರಿಗಣಿಸಿ ರೂ.4089.54 ಲಕ್ಷ + ಅಪೆಕ್ಸ್ ಬ್ಯಾಂಕಿನ ಅನುದಾನ ಖಾತೆಯಲ್ಲಿರುವ ಮೊತ್ತ ರೂ.1174.12 ಲಕ್ಷ ಒಟ್ಟು ರೂ.5263.66 ಲಕ್ಷಗಳು ಹಾಗೂ ಬಡ್ಡಿ ರೂ.490.75 ಲಕ್ಷಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಗಿರುತ್ತದೆ.

ಆದುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂ : ಸಿಒ 50 ಸಿಎಲ್‌ಎಸ್ 2007, ಬೆಂಗಳೂರು, ದಿನಾಂಕ : 17–05–2010

ಪ್ರಸ್ತಾವನೆಯಲ್ಲಿ ತಿಳಿಸಿರುವ ಕಾರಣಗಳ ಹಿನ್ನೆಲೆಯಲ್ಲಿ 2006–07ನೇ ಸಾಲಿನ ಸಾಲಮನ್ನಾ ಯೋಜನೆಯಡಿ ರೈತರಿಗೆ ಹಿಂದಿರುಗಿಸಬೇಕಾದ ಮೊತ್ತದ ಬಾಬ್ತು ಅಸಲು **ರೂ.4089.54 ಲಕ್ಷಗಳನ್ನು** (ರೂಪಾಯಿ ನಲವತ್ತು ಕೋಟಿ ಎಂಬತ್ತೊಂಬತ್ತು ಲಕ್ಷ ಐವತ್ನಾಲ್ಕು ಸಾವಿರಗಳು ಮಾತ್ರ) ಹಾಗೂ ಬಡ್ಡಿ ಮೊತ್ತ **ರೂ.490.75 ಲಕ್ಷಗಳನ್ನು** (ರೂಪಾಯಿ ನಾಲ್ಕು ಕೋಟಿ ತೊಂಬತ್ತು ಲಕ್ಷ ಎಪ್ಪತ್ತೈದು ಸಾವಿರಗಳು ಮಾತ್ರ) ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು 2010–11 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ **"2425–00–107–2–46– ಸಾಲಮನ್ನಾ–106– ಸಹಾಯಧನ (ಯೋಜನೇತರ)"** ಇದರ ಅಡಿಯಲ್ಲಿ ಭರಿಸತಕ್ಕದ್ದು.

ಈ ಹಣವನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು (ಪತ್ತು) ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರು ಹಣ ಸಂದಾಯ ರಸೀದಿ ಮೂಲಕ ಸಹಕಾರ ಸಂಘಗಳ ಅಪರ ನಿಬಂಧಕರು (ಆಡಳಿತ ಮತ್ತು ಅಭಿವೃದ್ಧಿ), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರ ಮೇಲು ಸಹಿ ಪಡೆದು ಖಜಾನೆಯಿಂದ ಪಡೆಯತಕ್ಕದ್ದು.

ಸಹಕಾರ ಸಂಘಗಳ ನಿಬಂಧಕರು ಈಗ ಬಿಡುಗಡೆ ಮಾಡಲಾದ ರೂ.4089.54 ಲಕ್ಷಗಳು ಹಾಗೂ ಅಪೆಕ್ಸ್ ಬ್ಯಾಂಕಿನ ಅನುದಾನ ಖಾತೆಯಲ್ಲಿರುವ ಮೊತ್ತ ರೂ.1174.12 ಲಕ್ಷಗಳು ಸೇರಿ ಒಟ್ಟು ರೂ. 5263.66 ಲಕ್ಷಗಳನ್ನು ರೈತರ ಖಾತೆಗಳಿಗೆ ಬಡ್ಡಿ ಸಹಿತ ಬಿಡುಗಡೆ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : **ಆಇ / 121 / ವೆಚ್ಚ–2 / 10, ದಿನಾಂಕ : 19–04–2010** ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ. ಉಮೇಶ್

ಸರ್ಕಾರದ ಅಧೀನ ಕಾರ್ಯದರ್ಶಿ,

ಸಹಕಾರ ಇಲಾಖೆ.

ಪಿ.ಆರ್. 1364

ಕಂದಾಯ ಸಚಿವಾಲಯ

ವಿಷಯ : ಶ್ರೀ ಹೆಚ್. ನಂಜಯ್ಯ, ಹಿಂದಿನ ತಹಶೀಲ್ದಾರ್, ಹೊಸಕೋಟೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಪ್ರಸ್ತುತ ವಿಶೇಷ ತಹಶೀಲ್ದಾರ್, ಪೂರ್ವ ತಾಲ್ಲೂಕು, ಕೃಷ್ಣರಾಜಪುರ, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸುವ ಕುರಿತು–ಆದೇಶ.

ಓದಲಾಗಿದೆ :

1. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಪ್ರಸ್ತಾವನೆ ಸಂಖ್ಯೆ : ಆರ್‌ಆರ್‌ಟಿಸಿಆರ್/165/08–09, ದಿನಾಂಕ 6–4–2009.
2. ಸರ್ಕಾರಿ ಆದೇಶ ಸಂಖ್ಯೆ : ಕಂಇ 05 ಎಡಿಇ 2009, ದಿನಾಂಕ 8–4–2009.
3. ಕೆ.ಎ.ಟಿ. ಅರ್ಜಿ ಸಂಖ್ಯೆ : 1996/2009 ದಿನಾಂಕ 24–4–2009ರ ಮಧ್ಯಂತರ ಆದೇಶ.
4. ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ : ಕಂಇ 05 ಎಡಿಇ 2009 ದಿನಾಂಕ 20.8.2009.
5. ಸರ್ಕಾರಿ ಆದೇಶ ಸಂಖ್ಯೆ : ಕಂಇ 05 ಎಡಿಇ 2009, ದಿನಾಂಕ 5–9–2009.
6. ಶ್ರೀ ಹೆಚ್. ನಂಜಯ್ಯ, ತಹಶೀಲ್ದಾರ್‌ರವರ ಲಿಖಿತ ಹೇಳಿಕೆ ದಿನಾಂಕ 26–12–2009.
7. ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಪತ್ರ ಸಂಖ್ಯೆ : ಇಎಸ್‌ಟಿ(2) ಸಿಸಿಎ.ಸಿಆರ್/03–09–10, ದಿನಾಂಕ 13–4–2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಹೊಸಕೋಟೆ ತಾಲ್ಲೂಕಿನ ಅನುಗೊಂಡನಹಳ್ಳಿ ಹೋಬಳಿಯ ನಾರಾಯಣಕೆರೆ ಗ್ರಾಮದ ಸರ್ವೆ ನಂ. 131/3 ರ ವಿಸ್ತೀರ್ಣ 1 ಎಕರೆ 25 ಗುಂಟೆ ಜಮೀನಿನ ಬಗ್ಗೆ ಉಪ ವಿಭಾಗಾಧಿಕಾರಿ, ದೊಡ್ಡಬಳ್ಳಾಪುರ ಉಪ ವಿಭಾಗ, ಬೆಂಗಳೂರು ರವರ ಪ್ರಕರಣ ಸಂಖ್ಯೆ : ಎಲ್‌ಆರ್‌ಎಫ್ (ಹೆಚ್.ಕೆ.ಟಿ.) 144/1998–99, ದಿನಾಂಕ 7–4–2003ರ ಆದೇಶದಂತೆ ಅದು ಸೃಷ್ಟಿಸಿದ ನಕಲಿ ಆದೇಶವಾಗಿದ್ದು, ಈ ಬಗ್ಗೆ ಸುಳ್ಳು ದಾಖಲೆ ಸೃಷ್ಟಿ ಮಾಡಿ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿರುವ ಶ್ರೀಮತಿ ವೆಂಕಟಮ್ಮ ಕೋಂ. ಲೇಟ್ ಯಲ್ಲಪ್ಪರವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲು ಹಾಗೂ ಈ ರೀತಿ ಸುಳ್ಳು ಕಂದಾಯ ದಾಖಲೆ ಸೃಷ್ಟಿಸಲು ನೆರವಾದ ಕಂದಾಯ ಇಲಾಖೆಯ ಅಧಿಕಾರಿ/ನೌಕರರನ್ನು ಗುರುತಿಸಿ ಇಲಾಖೆ ವಿಚಾರಣೆ ನಡೆಸಲು ಸರ್ಕಾರದ ಪತ್ರದಲ್ಲಿ ನಿರ್ದೇಶಿಸಲಾಗಿತ್ತು. ಅದರಂತೆ ಸರ್ವೆ ನಂ. 131/3 ವಿಸ್ತೀರ್ಣ 1 ಎಕರೆ 25 ಗುಂಟೆ ಜಮೀನಿಗೆ ಸಂಬಂಧಿಸಿದಂತೆ, ಸೃಜಿಸಿದ ಆದೇಶ ಹೊರಡಿಸಲು ಕಾರಣಕರ್ತರಾದ ಸರ್ಕಾರಿ ನೌಕರರು ಹಾಗೂ ದೋಷದ ಮ್ಯುಟೇಷನ್ ಸೃಷ್ಟಿಗೆ ಕಾರಣಕರ್ತರಾದ ಸರ್ಕಾರಿ ಅಧಿಕಾರಿ/ನೌಕರರನ್ನು ಗುರುತಿಸಿ ವರದಿ ನೀಡಲು ಅಪರ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು. ಅದರಂತೆ ಸದರಿಯವರು ದಿನಾಂಕ 4–4–2009 ರಂದು ಹೊಸಕೋಟೆ ತಾಲ್ಲೂಕು ಕಛೇರಿಯಲ್ಲಿ ವಿಚಾರಣೆ ನಡೆಸಿ, ಜಿಲ್ಲಾಧಿಕಾರಿ ಕಛೇರಿಗೆ ವರದಿಯನ್ನು ನೀಡಿರುತ್ತಾರೆ. ಸದರಿ ವರದಿಯಲ್ಲಿ ದಾಖಲೆಗಳನ್ನು ಪರಿಶೀಲಿಸದೆ ಶ್ರೀಮತಿ ವೆಂಕಟಮ್ಮ ಕೋಂ. ಲೇಟ್ ಯಲ್ಲಪ್ಪರವರ ಹೆಸರಿಗೆ ಖಾತೆ ಮಾಡಲು ಆದೇಶಿಸಿರುವ ಅಂದಿನ ತಹಶೀಲ್ದಾರರಾಗಿ ಕಾರ್ಯ ನಿರ್ವಹಿಸಿದ ಶ್ರೀ ಹೆಚ್. ನಂಜಯ್ಯ (ಹಾಲಿ ತಹಶೀಲ್ದಾರ್, ತಿಪಟೂರು ತಾಲ್ಲೂಕು) ಮತ್ತು ಆ ಸಮಯದಲ್ಲಿ ವಿಷಯ ನಿರ್ವಾಹಕರಾಗಿ ಕಾರ್ಯನಿರ್ವಹಿಸಿದ್ದ ಶ್ರೀ ಸಂಪಂಗಿ ರಾಮಯ್ಯ, ಪ್ರ.ದ.ಸ. (ಆಗಸ್ಟ್ 2007 ರಂದು ನಿವೃತ್ತಿ ಹೊಂದಿರುತ್ತಾರೆ) ರವರು ಪ್ರಮುಖ ಕಾರಣರಾಗಿರುತ್ತಾರೆಂದು ವರದಿ ಮಾಡಿರುತ್ತಾರೆ. ಈ ವರದಿ ಆಧಾರದ ಮೇಲೆ ಶ್ರೀ ಹೆಚ್. ನಂಜಯ್ಯ, ತಹಶೀಲ್ದಾರ್, ತಿಪಟೂರು ತಾಲ್ಲೂಕು ಹಾಗೂ ಶ್ರೀ ಸಂಪಂಗಿ ರಾಮಯ್ಯ, ನಿವೃತ್ತ ಪ್ರ.ದ.ಸ. ರವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿದ್ದರು.

ಮೇಲೆ ಓದಲಾದ ಕ್ರಮಸಂಖ್ಯೆ : (2) ರ ಸರ್ಕಾರದ ಆದೇಶದಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮಾವಳಿಯ ನಿಯಮ 10(1)(ಡಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಹೆಚ್. ನಂಜಯ್ಯ, ಹಿಂದಿನ ತಹಶೀಲ್ದಾರ್, ಹೊಸಕೋಟೆ ತಾಲ್ಲೂಕು ಇವರ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇರಿಸಿ/ಕ್ರಿಮಿನಲ್ ಮೊಕದ್ದಮೆ ಕಾಯ್ದಿರಿಸಿ, ಸದರಿಯವರನ್ನು ಸೇವೆಯಿಂದ ಅಮಾನತ್ತಿನಲ್ಲಿ ಇಡಲಾಗಿತ್ತು. ಹಾಗೂ ಈ ಪ್ರಕರಣದಲ್ಲಿ ಭಾಗಿಯಾದ ಶ್ರೀ ಸಂಪಂಗಿ ರಾಮಯ್ಯ, ಹಿಂದಿನ ಪ್ರ.ದ.ಸ. ಹೊಸಕೋಟೆ ತಾಲ್ಲೂಕು ಪ್ರಸ್ತುತ ನಿವೃತ್ತ ಇವರ ವಿರುದ್ಧ ಕೆ.ಸಿಎಸ್.ಆರ್. ನಿಯಮ 214 ರಲ್ಲಿ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಲಾಗಿತ್ತು.

ಮೇಲೆ ಓದಲಾದ ಕ್ರಮಸಂಖ್ಯೆ : (3) ರಲ್ಲಿ ಶ್ರೀ ಹೆಚ್. ನಂಜಯ್ಯ, ತಹಶೀಲ್ದಾರ್ ಇವರು ಸರ್ಕಾರದ ಅಮಾನತ್ತಿನ ಆದೇಶದ ವಿರುದ್ಧ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ : 1996/2009 ನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ದಿನಾಂಕ 24–4–2009 ರಂದು ನೀಡಿದ ಮಧ್ಯಂತರ ಆದೇಶದಲ್ಲಿ, ಮೇಲ್ಕಂಡ ಅಮಾನತ್ತಿನ ಆದೇಶಕ್ಕೆ 3

ತಿಂಗಳ ಅವಧಿಗೆ ಅಥವಾ ಅರ್ಜಿಯ ಇತ್ಯರ್ಥವಾಗುವವರಗೆ ಯಾವುದು ಮೊದಲೋ ಅಲ್ಲಿಯವರೆಗೆ ಮಧ್ಯಂತರ ಆದೇಶ ನೀಡಿ ಆದೇಶಿಸಿತ್ತು. ಶ್ರೀ ಹೆಚ್. ನಂಜಯ್ಯ, ತಹಶೀಲ್ದಾರ್ ರವರು ಮಾನ್ಯ ನ್ಯಾಯಾಲಯದ ದಿನಾಂಕ 24–4–2009ರ ಆದೇಶವನ್ನು ಈವರೆಗೂ ಸರ್ಕಾರವು ಪಾಲಿಸಿರುವುದಿಲ್ಲವೆಂದು ಕೆ.ಎ.ಟಿ.ಯಲ್ಲಿ ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ : 194/2009 ನ್ನು ಸಲ್ಲಿಸಿದ್ದರು.

ಮೇಲೆ ಓದಲಾದ ಕ್ರಮಸಂಖ್ಯೆ : (4) ರಲ್ಲಿ ಸರ್ಕಾರವು ಶ್ರೀ ಹೆಚ್. ನಂಜಯ್ಯ (ಅಮಾನತ್ತು) ಹಿಂದಿನ ತಹಶೀಲ್ದಾರ್, ಹೊಸಕೋಟೆ ತಾಲ್ಲೂಕು ಇವರಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ಜಿಲ್ಲಾಧಿಕಾರಿಗಳು ಕಳುಹಿಸಿರುವ ದೋಷಾರೋಪಣೆ ಪಟ್ಟಿಯ ಅನುಬಂಧ 1 ರಿಂದ 4 ಗಳನ್ನು ಜಾರಿಗೊಳಿಸಿ, ಸದರಿ ನೋಟೀಸು ಸ್ವೀಕರಿಸಿದ 15 ದಿನಗಳೊಳಗೆ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ತಪ್ಪಿದಲ್ಲಿ ನಿಮ್ಮ ಪ್ರತಿವಾದವೇನೂ ಇಲ್ಲವೆಂದು ಭಾವಿಸಿ, ಕ.ನಾ.ಸೇ (ವ.ನಿ.&ಮೇ) ನಿಯಮ 1957ರ ನಿಯಮ 11ನೇ ಮೇರೆಗೆ ಅವರ ಮೇಲೆ ಏಕಪಕ್ಷೀಯವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿರುತ್ತದೆ.

ಶ್ರೀ ಹೆಚ್. ನಂಜಯ್ಯ, ತಹಶೀಲ್ದಾರ್ ರವರು ಮಾನ್ಯ ನ್ಯಾಯಾಲಯದ ದಿನಾಂಕ 24–4–2009 ರ ಆದೇಶವನ್ನು ಈವರೆಗೂ ಸರ್ಕಾರವು ಪಾಲಿಸಿರುವುದಿಲ್ಲವೆಂದು ಕೆ.ಎ.ಟಿ. ಯಲ್ಲಿ ನ್ಯಾಯಾಲಯ ನಿಂದನಾ ಅರ್ಜಿ ಸಂಖ್ಯೆ : 194/2009 ನ್ನು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ, ಸರ್ಕಾರವು ಮೇಲೆ ಓದಲಾದ (5)ರ ಸರ್ಕಾರದ ದಿನಾಂಕ 5–9–2009 ರ ಆದೇಶದಲ್ಲಿ ಶ್ರೀ ಹೆಚ್.ನಂಜಯ್ಯ, ಹಿಂದಿನ ತಹಶೀಲ್ದಾರ್, ತಿಪಟೂರು ತಾಲ್ಲೂಕು ಇವರನ್ನು 1957ರ ಕರ್ನಾಟಕ ನಾಗರೀಕ ಸೇವಾ (ವ.ನಿ.&ಮೇ) ನಿಯಮಗಳ ನಿಯಮ 10(5)(ಸಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಅವರ ವಿರುದ್ಧ ಇಲಾಖೆ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಕಾಯ್ದಿರಿಸಿ, ಸದರಿಯವರ ಅಮಾನತ್ತನ್ನು ತೆರವುಗೊಳಿಸಿ, ಅವರನ್ನು ಹಾವೇರಿ ಜಿಲ್ಲೆಯ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಖಾಲಿ ಇರುವ ಚುನಾವಣಾ ತಹಶೀಲ್ದಾರ್ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ದಿನಾಂಕ 3–11–2009ರ ಸರ್ಕಾರದ ಪತ್ರದಲ್ಲಿ ಶ್ರೀ ಹೆಚ್. ನಂಜಯ್ಯ, ಹಿಂದಿನ ತಹಶೀಲ್ದಾರ್, ಹೊಸಕೋಟೆ ಇವರಿಗೆ ಕಾರಣ ಕೇಳುವ ನೋಟೀಸಿನೊಂದಿಗೆ ದೋಷಾರೋಪಣೆ ಪಟ್ಟಿಯನ್ನು ದ್ವಿಪ್ರತಿಯಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಗೆ ಕಳುಹಿಸಿ ಸದರಿ ಅಧಿಕಾರಿಗೆ ಜಾರಿ ಮಾಡಿ, ಸ್ವೀಕೃತಿ ಪಡೆದು, ಸರ್ಕಾರಕ್ಕೆ ಕಳುಹಿಸುವಂತೆ ಕೋರಲಾಗಿತ್ತು. ಅದರಂತೆ, ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ರವರು ಸದರಿ ಅಧಿಕಾರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿರುವ ಕುರಿತು ಸರ್ಕಾರಕ್ಕೆ ದಿನಾಂಕ 19–2–2010 ರಂದು ಪತ್ರ ಬರೆದು ಸ್ವೀಕೃತಿಯನ್ನು ಕಳುಹಿಸಿರುತ್ತಾರೆ.

ಸರ್ಕಾರದ ಕಾರಣ ಕೇಳುವ ನೋಟೀಸಿಗೆ ಶ್ರೀ ಹೆಚ್. ನಂಜಯ್ಯ, ಹಿಂದಿನ ತಹಶೀಲ್ದಾರ್, ರವರು ಮೇಲೆ ಓದಲಾದ ಕ್ರಮ ಸಂಖ್ಯೆ (6) ರ ದಿನಾಂಕ 26–12–2009 ರಲ್ಲಿ, ತಾವು ಹಿಂದೆ ಹೊಸಕೋಟೆ ತಾಲ್ಲೂಕು ತಹಶೀಲ್ದಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ಅನುಗೊಂಡನಹಳ್ಳಿ ಹೋಬಳಿಯ ನಾರಾಯಣ ಕೆರೆ ಗ್ರಾಮದ ಸರ್ವೆ ನಂ. 131/3 ರಲ್ಲಿ 1.25 ಎಕರೆ ಖಾಸಗಿ ಜಮೀನಿನ ಖಾತೆ ಬದಲಾವಣೆ ಬಗ್ಗೆ ಉಭಯತ್ರರಿಗೆ ನೋಟೀಸು ಜಾರಿ ಮಾಡಿ ವಿಚಾರಣೆ ಕೈಗೊಂಡು ಕಡತ ಪರಿಶೀಲಿಸಿ, ಪ್ರಕರಣ ಸಂಖ್ಯೆ : ಆರ್‌ಆರ್‌ಟಿ (2) ಡಿಸ್ 10/2007–08 ದಿನಾಂಕ 3–6–2007 ರಂತೆ ನಿಯಮಾನುಸಾರ ಆದೇಶ ಮಾಡಲಾಗಿದ್ದು, ಈ ಬಗ್ಗೆ ಕರ್ತವ್ಯಲೋಪ ಎಸಗಿರುವುದಿಲ್ಲವಾದ್ದರಿಂದ ಕಾರಣ ಕೇಳುವ ನೋಟೀಸಿನ ವಿಷಯ ಹಾಗೂ ಅದಕ್ಕೆ ಲಗತ್ತಿಸಿರುವ ಅನುಬಂಧ 1 ರಿಂದ 4 ರಲ್ಲಿನ ಪೂರ್ಣ ದೋಷಾರೋಪಣೆಯನ್ನು ಒಪ್ಪುವುದಿಲ್ಲ ಹಾಗೂ ನಿಶ್ಚಿತವಾಗಿ ಅಲ್ಲಗಳೆದು, ಕೆ.ಸಿ.ಎಸ್.(ಸಿಸಿಎ) ನಿಯಮಗಳ ಪ್ರಕಾರ ಕೈಗೊಳ್ಳಬೇಕೆಂದಿರುವ ಕ್ರಮವನ್ನು ದಯಮಾಡಿ ಕೈಬಿಡಬೇಕೆಂದು ತಮ್ಮ ಲಿಖಿತ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : (7) ರ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಇವರ ದಿನಾಂಕ 13.4.2010 ರ ಪತ್ರದಲ್ಲಿ, ತಹಶೀಲ್ದಾರ್, ಹೊಸಕೋಟೆ ತಾಲ್ಲೂಕು ರವರು ಶ್ರೀ ಸಂಪಂಗಿ ರಾಮಯ್ಯ, ಹಿಂದಿನ ಪ್ರಥಮ ದರ್ಜೆ ಸಹಾಯಕರು ಇವರ ವಿರುದ್ಧ ಈ ಪ್ರಕರಣದಲ್ಲಿ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ತಿಳಿಸಿರುವ ಹಿನ್ನೆಲೆಯಲ್ಲಿ, ಮೇಲಿನ ಪ್ರಕರಣದಲ್ಲಿ ಸತ್ಯಾಸತ್ಯತೆಯನ್ನು ತಿಳಿದುಕೊಂಡು ನಿರ್ಣಯ ತೆಗೆದುಕೊಳ್ಳುವ ಸಲುವಾಗಿ, ಶ್ರೀ ಹೆಚ್. ನಂಜಯ್ಯ, ಹಿಂದಿನ ತಹಶೀಲ್ದಾರ್, ಹೊಸಕೋಟೆ ತಾಲ್ಲೂಕು ಇವರ ವಿರುದ್ಧ ಬೆಂಗಳೂರಿನಲ್ಲಿ ಇಲಾಖಾ ವಿಚಾರಣೆ ನಡೆಸಲು ಶ್ರೀ ರುಕ್ಕಾಜಿ ರಾಮಕೃಷ್ಣಭಟ್ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ತಹಶೀಲ್ದಾರ್, ಹೊಸಕೋಟೆ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂ : ಕಂಇ 05 ಎಡಿಇ 2009, ಬೆಂಗಳೂರು, ದಿನಾಂಕ : 26–05–2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಶ್ರೀ ಹೆಚ್. ನಂಜಯ್ಯ, ಹಿಂದಿನ ತಹಶೀಲ್ದಾರ್, ಹೊಸಕೋಟೆ ತಾಲ್ಲೂಕು ಇವರ ವಿರುದ್ಧ ಬೆಂಗಳೂರಿನಲ್ಲಿ ಇಲಾಖಾ ವಿಚಾರಣೆ ನಡೆಸಲು ಶ್ರೀ ರುಕ್ಕಾಜಿ ರಾಮಕೃಷ್ಣಭಟ್, ನಿವೃತ್ತ ನ್ಯಾಯಾಧೀಶರು, ನಂ.2, 1ನೇ ಕ್ರಾಸ್, ಜುಡಿಷಿಯಲ್ ಲೇಔಟ್, ಸಂಜಯ ನಗರ, ಬೆಂಗಳೂರು–560 094 ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು 1957ರ ಕರ್ನಾಟಕ

ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11(5) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ತಹಶೀಲ್ದಾರ್, ಹೊಸಕೋಟೆ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

ವಿಚಾರಣಾಧಿಕಾರಿಗಳು ಈ ಪ್ರಕರಣದ ವಿಚಾರಣೆಯನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರ ಕಛೇರಿಯ ಆವರಣದಲ್ಲಿ ಅಥವಾ ಅವರು ಗುರುತಿಸಿ ನಿಗದಿಪಡಿಸಿದ ಸ್ಥಳದಲ್ಲಿ ನಡೆಸತಕ್ಕದ್ದು. ಈ ಉದ್ದೇಶಕ್ಕಾಗಿ ಲಭ್ಯವಿರುವ ಕಛೇರಿಗಳಲ್ಲಿ ವಿಚಾರಣಾಧಿಕಾರಿಗಳಿಗೆ ಸ್ಥಳಾವಕಾಶ ಮಾಡುವುದು ಹಾಗೂ ಸಂಬಂಧಿಸಿದ ಕಛೇರಿಯಲ್ಲಿ ಲಭ್ಯವಿರುವ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸಹಾಯವನ್ನು ಹಾಗೂ ಲೇಖನ ಸಾಮಗ್ರಿಗಳನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಒದಗಿಸತಕ್ಕದ್ದು.

ಈ ಪ್ರಕರಣದ ವಿಚಾರಣೆಗಾಗಿ ವಿಚಾರಣಾಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 22 ಸೇಇವಿ 2007 ದಿನಾಂಕ : 11–4–2008 ರನ್ವಯ ರೂ. 8000/– (ಎಂಟು ಸಾವಿರ ರೂ.ಗಳು ಮಾತ್ರ) ಗಳ ಸಂಚಿತ ಸಂಭಾವನೆಯನ್ನು ಹಾಗೂ ರೂ.1500 (ಒಂದು ಸಾವಿರದ ಐನೂರು ರೂ.ಗಳು ಮಾತ್ರ) ಗಳ ವಾಹನ ಭತ್ಯೆ (ಕನ್ವೇಯನ್ಸ್ ಅಲೋಯನ್ಸ್) ಅನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರು ಪಾವತಿ ಮಾಡತಕ್ಕದ್ದು.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆಯನ್ನು ಮೇಲ್ಕಂಡ ನಿಯಮಗಳ ನಿಯಮ 11 ಮತ್ತು 11(ಎ) ರಲ್ಲಿನ ವಿಧಿವಿಧಾನವನ್ನು ಅನುಸರಿಸಿ, ಜರುಗಿಸಿ, ವಿಚಾರಣಾ ವರದಿಯನ್ನು ಎರಡು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಬಿ. ಸಸಾಲಟ್ಟಿ,

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1365 ಕಂದಾಯ ಇಲಾಖೆ (ಸೇವೆಗಳು–3)

ಒಳಾಡಳಿತ ಸಚಿವಾಲಯ

ಸಂಖ್ಯೆ : ಒಇ 153 ಪೊಸಿಪ 2010, ಬೆಂಗಳೂರು, ದಿನಾಂಕ : 17–04–2010

ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ : ಒಇ 64 ಪೊಸಿಪ 2010 ದಿನಾಂಕ : 25–03–2010 ರ ಆದೇಶದ ಭಾಗದಲ್ಲಿ "ಹೊಸದಾಗಿ ಸೃಜಿಸಿದ ಹುದ್ದೆಗೆ" ಎಂಬುದರ ಬದಲಾಗಿ "ಸರ್ಕಾರದ ಅದೇಶ ಸಂಖ್ಯೆ : ಹೆಚ್‌ಡಿ 33 ಪಿ.ಓ.ಪಿ 2010 ದಿನಾಂಕ: 11–03–2010ರನ್ವಯ ಪೊಲೀಸ್ ಅಧೀಕ್ಷಕರು, ಸ್ಪೆಷಲ್ ಟಾಸ್ಕ್ ಫೋರ್ಸ್, ಬೆಂಗಳೂರಿನಲ್ಲಿದ್ದ ಎರಡು ಹುದ್ದೆಗಳಲ್ಲಿ ಒಂದು ಪೊಲೀಸ್ ಅಧೀಕ್ಷಕರ ಹುದ್ದೆಯನ್ನು ಉಪ ಪೋಲೀಸ್ ಆಯುಕ್ತರು (ಕಾನೂನು ಮತ್ತು ಸುವ್ಯವಸ್ಥೆ) ಎಂದು ಮರು ಪದನಾಮಿಕರಿಸಿ ಪೊಲೀಸ್ ಕಮೀಷನರೇಟ್, ಮಂಗಳೂರು ನಗರಕ್ಕೆ ಸ್ಥಳಾಂತರಿಸಲಾದ ಹುದ್ದೆಗೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಟಿ.ಎನ್. ರವಿಪ್ರಕಾಶ್

ಸರ್ಕಾರದ ಅಧೀನ ಕಾರ್ಯದರ್ಶಿ,

1106 ಒಳಾಡಳಿತ ಇಲಾಖೆ, (ಪೊಲೀಸ್ ಸೇವೆಗಳು)

ಶಿಕ್ಷಣ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ಈ ಮೂರು ನಿಧಿಗಳಿಗೆ ಅನ್ವಯಿಸುವಂತೆ ಏಕರೂಪ ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ : ಇಡಿ 24 ಟಿಪಿಯು 2002, ದಿನಾಂಕ : 20–03–2002
2. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕಾರ್ಯದರ್ಶಿ/ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಇವರ ಪತ್ರ ಸಂಖ್ಯೆ. ಎಫ್ 1/ಶಿಕನಿ/ಆಡಳಿತ/ರಾಜ್ಯ ಸಮಿತಿ/ 39/2006–07, ದಿನಾಂಕ : 14–05–2007.
3. ಸರ್ಕಾರದ ಆದೇಶ ಸಂಖ್ಯೆ. ಇಡಿ 198 ಟಿಪಿಯು 2006, ದಿನಾಂಕ : 12–07–2007.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ. ಎಫ್ 1/ಶಿಕನಿ/ಆಡಳಿತ/ರಾಜ್ಯ ಸಮಿತಿ/39/2006–07, ದಿನಾಂಕ : 06–10–2009.

ಪ್ರಸ್ತಾವನೆ :

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕಾರ್ಯದರ್ಶಿ/ಖಜಾಂಚಿಗಳು, ಇವರು ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಹಾಗೂ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ಈ ಮೂರು ನಿಧಿಗಳಿಗೆ ಅನ್ವಯಿಸುವಂತೆ ಏಕರೂಪ ಸಮಿತಿಯನ್ನು ರಚಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಎರಡು ವರ್ಷಗಳ ಅವಧಿಗೆ ಸಮಿತಿಯನ್ನು ರಚಿಸಲಾಗಿದೆ. ತದನಂತರ ಮೇಲೆ (2) ರಲ್ಲಿ ಓದಲಾದ ಪ್ರಸ್ತಾವನೆಯನ್ವಯ ಈ ಸಮಿತಿಯನ್ನು ಮೇಲೆ (3) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಪುನಃ ಎರಡು ವರ್ಷಗಳ ಕಾಲಾವಧಿಗೆ ಪುನರ್ ರಚಿಸಲಾಯಿತು. ಈ ಸಮಿತಿಯ ಕಾಲಾವಧಿಯು 13ನೇ ಜುಲೈ 2009ಕ್ಕೆ ಮುಗಿದಿರುತ್ತದೆ. ಆದುದರಿಂದ ಮೇಲೆ (4) ರಲ್ಲಿ ಓದಲಾದ ಪ್ರಸ್ತಾವನೆಯಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಕಾರ್ಯದರ್ಶಿಗಳು/ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಇವರು ಎನ್.ಎಫ್.ಟಿ.ಡಬ್ಲ್ಯೂ. (ನ್ಯಾಷನಲ್ ಫೌಂಡೇಶನ್ ಫಾರ್ ಟೀಚರ್ಸ್ ವೆಲ್ಫೇರ್) ನಿಯಮಗಳು 1962ರ ನಿಯಮ 4(1) ರಲ್ಲಿ ಸೂಚಿಸಿರುವಂತೆ ಸರ್ಕಾರೇತರ ಸದಸ್ಯರಲ್ಲಿ ಶಿಕ್ಷಣ ತಜ್ಞರನ್ನು ನಾಮನಿರ್ದೇಶನ ಮಾಡಿ, ಸಮಿತಿಯನ್ನು ಎರಡು ವರ್ಷಗಳಿಗೆ ಪುನರ್ ರಚಿಸಬಹುದೆಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಅದೇಶ ಸಂಖ್ಯೆ : ಇಡಿ 41 ಎಸ್‌ಓಹೆಚ್ 2010, ಬೆಂಗಳೂರು, ದಿನಾಂಕ : 6–3–2010

3. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ ಈ ಮೂರು ನಿಧಿಗಳ ಆಡಳಿತ ನಿರ್ವಹಣೆಗಾಗಿ ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ 02 ವರ್ಷಗಳ ಅವಧಿಗೆ 09 ಅಧಿಕಾರಯುಕ್ತ ಸದಸ್ಯರು ಹಾಗೂ 03 ಅಧಿಕಾರೇತರ ಸದಸ್ಯರನ್ನೊಳಗೊಂಡ, ಕೆಳಕಂಡ ಏಕರೂಪ ಸಮಿತಿಯನ್ನು ಪುನರ್‌ರಚಿಸಲಾಗಿದೆ. ವಿವರ ಕೆಳಕಂಡಂತಿದೆ.

ಕ್ರ..ಸಂ.	ಹೆಸರು/ಪದನಾಮ/ವಿಳಾಸ	ಹುದ್ದೆ
01	ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು	ಅಧ್ಯಕ್ಷರು
02	ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರ, ಬೆಂಗಳೂರು	ಸದಸ್ಯರು
03	ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು	ಸದಸ್ಯರು
04	ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು	ಕಾರ್ಯದರ್ಶಿ/ಖಜಾಂಚಿಗಳು
05	ಆಯುಕ್ತರು ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು	ಸದಸ್ಯರು
06	ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು	ಸದಸ್ಯರು
07	ನಿರ್ದೇಶಕರು/ಆಯುಕ್ತರು, ಪದವಿ ಪೂರ್ವ ಶಿಕ್ಷಣ ಇಲಾಖೆ	ಸದಸ್ಯರು
08	ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬೆಂಗಳೂರು	ಸದಸ್ಯರು
09	ಅಧ್ಯಕ್ಷರು, ಕರ್ನಾಟಕ ರಾಜ್ಯ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘ, ಬೆಂಗಳೂರು	ಸದಸ್ಯರು
	ಸರ್ಕಾರೇತರ ಸದಸ್ಯರು	
01	ಶ್ರೀ ಜಿ. ಎಲ್. ಹೆಗಡೆ, ನಿವೃತ್ತ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) "ನೆನಪು" ಕೂರ್ಸೆ ಕಾಂಪೌಂಡ್, ಬನವಾಸಿ ರಸ್ತೆ, ಸಿರಸಿ, ಉತ್ತರ ಕನ್ನಡ ಜಿಲ್ಲೆ.	ಸದಸ್ಯರು
02	ಶ್ರೀ ಕುಪೇಂದ್ರಪಾಟೀಲ್, ನಿವೃತ್ತ ಪ್ರಾಚಾರ್ಯರು, ವಿಶ್ವೇಶ್ವರಯ್ಯ ಕಾಲೋನಿ, ಸೇಡಂ ರಸ್ತೆ, ಗುಲ್ಬರ್ಗ.	ಸದಸ್ಯರು
03	ಶ್ರೀ ಸುಬ್ಬರಾಯಶೆಟ್ಟಿ, ನ್ಯಾಯವಾದಿಗಳು, ನಂ. 19, 3ನೇ ಅಡ್ಡರಸ್ತೆ 1ನೇ ಸ್ಟೇಜ್, ಟೀಚರ್ಸ್ ಕಾಲೋನಿ, ಕಾಚರಕನಹಳ್ಳಿ, ಹೆಚ್.ಬಿ.ಆರ್.ಲೇಔಟ್, ಬೆಂಗಳೂರು–43.	ಸದಸ್ಯರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಹೆಚ್.ಟಿ. ಜಯರಾಂ

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ. (ಪ್ರೌಢ)

1107

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಅಧಿಕೃತ ಈಕ್ವಿಟಿ ಷೇರು ಬಂಡವಾಳವನ್ನು ರೂ. 510.00 ಕೋಟಿಗಳಿಗೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ : ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ. ಕರ ಅನಿನಿ/ವ್ಯ.ನಿ/2009-10/2741 ದಿನಾಂಕ : 19-01-2010.

ಪ್ರಸ್ತಾವನೆ :

1. ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ರವರು ಪ್ರಧಾನ ಕಾರ್ಯದರ್ಶಿಗಳು ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ ಇವರಿಗೆ ಬರೆದಿರುವ ಅರೆ ಸರ್ಕಾರಿ ಪತ್ರ ಸಂಖ್ಯೆ . ಎಫ್‌ಡಿ/1296/ಪಿಎಸ್/ಎಫ್‌ಡಿ)/2009 ದಿನಾಂಕ : 28-03-2009 ರಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ರೂ. 250.00 ಕೋಟಿಗಳ ಈಕ್ವಿಟಿ ಷೇರು ಬಂಡವಾಳವನ್ನು ಹೂಡಲು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅಡಿಯಲ್ಲಿ ಮೈಸೂರು ಮಿನರಲ್ಸ್ ಲಿಮಿಟೆಡ್ ಇವರಿಗೆ ನಿರ್ದೇಶನ ನೀಡಿರುವ ಬಗ್ಗೆ ಪ್ರಸ್ತಾಪವಿರುತ್ತದೆ. ಈ ಮೊತ್ತವನ್ನು ಕರ್ನಾಟಕ ರಸ್ತೆ ನಿಧಿ ಸ್ಥಾಪಿಸಲು ಉಪಯೋಗಿಸುವಂತೆ ತಿಳಿಸಲಾಗಿತ್ತು.

2. ಎಂ.ಎಂ.ಎಲ್. 250.00 ಕೋಟಿ ರೂ.ಗಳ ಬಂಡವಾಳವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದಲ್ಲಿ ಹೂಡಿದ್ದರಿಂದ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ Authorised Equity share ಬಂಡವಾಳವನ್ನು ಪ್ರಸ್ತುತದ 200.00 ಕೋಟಿ ರೂ.ಗಳಿಂದ 450.00 ಕೋಟಿ ರೂ.ಗಳಿಗೆ ಹೆಚ್ಚಿಸಲು (1,000 ರೂ. ಮುಖ ಬೆಲೆಯ 20,00,000 ಸಂಖ್ಯೆ ಈಕ್ವಿಟಿ ಷೇರುಗಳು) ಸರ್ಕಾರದ ಆದೇಶ ಸಂಖ್ಯೆ : ಲೋಇ 1 ಇಎಪಿ 2009 ದಿನಾಂಕ: 05-08-2009 ರಲ್ಲಿ ಸೂಚಿಸಲಾಗಿತ್ತು.

3. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಅಧಿಕೃತ ಈಕ್ವೀಟಿ ಷೇರು ಬಂಡವಾಳವು ರೂ. 200.00 ಕೋಟಿಗಳಾಗಿದ್ದು, ಈ ಅಧಿಕೃತ ಈಕ್ವೀಟಿ ಷೇರು ಬಂಡವಾಳವನ್ನು ಕರ್ನಾಟಕ ಸರ್ಕಾರದ ಪೂರ್ಣ ವಂತಿಗೆ (Subscribe) ಮಾಡಲಾಗಿದ್ದು, ಈವರೆವಿಗೂ ಈಕ್ವೀಟಿ ಷೇರು ಬಂಡವಾಳವು ರೂ. 200.00 ಕೋಟಿಗಳಾಗಿರುತ್ತದೆ. (20,00,000) ಸಂಖ್ಯೆಯ ಈಕ್ವಿಟಿ ಷೇರುಗಳು ರೂ. 1000.00 (ಒಂದು ಸಾವಿರ) ಮುಖ ಬೆಲೆಯದ್ದಾಗಿದೆ.)

4. ಪ್ರಸ್ತುತ ನಿಗಮದ ಅಧಿಕೃತ ಷೇರು ಬಂಡವಾಳವು ರೂ. 200.00 ಕೋಟಿಗಳು ಹಾಗೂ ಎಂ.ಎಂ.ಎಲ್. ಸಂಸ್ಥೆಯ ಷೇರು ಬಂಡವಾಳ ರೂ. 250.00 ಕೋಟಿ ಆಗುವುದರಿಂದ, ಇದು ನಿಗಮದ ಅಧಿಕೃತ ಷೇರು ಬಂಡವಾಳಕ್ಕಿಂತ ಹೆಚ್ಚಾಗಿ ಮೆ:ಎಮ್.ಎಮ್.ಎಲ್. Holding Company ಆಗುತ್ತದೆ. ನಿಗಮವು ಮೆ:ಎಮ್.ಎಮ್.ಎಲ್. ಸಂಸ್ಥೆಗೆ Subsidiary ಕಂಪನಿ ಆಗುತ್ತದೆ ಮತ್ತು ನಿಗಮದ ಷೇರು ಬಂಡವಾಳವನ್ನು ರೂ. 510.00 ಕೋಟಿಗೆ ಹೆಚ್ಚಿಸಿದರೆ ನಿಗಮದ ಪಾಲು ಶೇ. 51 ರಷ್ಟು ಹಾಗೂ ಮೆ: ಮೆ:ಎಮ್.ಎಮ್.ಎಲ್. ಸಂಸ್ಥೆಯ ಪಾಲು ಶೇ.49 ರಷ್ಟು ಆಗುತ್ತದೆ. (ಅನುಪಾತ 51:49 ರಂತೆ) ಆದ್ದರಿಂದ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಷೇರು ಬಂಡವಾಳವನ್ನು ರೂ. 510.00 ಕೋಟಿಗಳಿಗೆ ಹೆಚ್ಚಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

5. ಸರ್ಕಾರದ ಅದೇಶ ಸಂಖ್ಯೆ. ಲೋಇ 81 ಇಎಪಿ 2001, ದಿನಾಂಕ 7ನೇ ನವೆಂಬರ್ 2001, ಪ್ರಕಾರ ಹುಡ್ಕೋ HUDCO ಸಂಸ್ಥೆಯಿಂದ ಪಡೆದಿರುವ ಸಾಲದ ಮರುಪಾವತಿಗೆ ಬಿಡುಗಡೆಯಾಗುವ ಅನುದಾನವನ್ನು ಈಕ್ವಿಟಿ ಷೇರು ಬಂಡವಾಳವಾಗಿ ನಿಗಮದಲ್ಲಿ ಪರಿಗಣಿಸಲಾಗಿದೆ. ಈ ಮೊತ್ತವನ್ನು ಪ್ರತಿ ವರ್ಷವು ಸಂತುಲನ ಪಟ್ಟಿ (Balance sheet) ದಲ್ಲಿ Advance Against Equity ಎಂದು ತೋರಿಸಲಾಗುತ್ತದೆ. ದಿನಾಂಕ : 31-03-2009ರ ಅಂತ್ಯಕ್ಕೆ ರೂ. 685.00 ಕೋಟಿಗಳನ್ನು ಈಕ್ವಿಟಿ ಷೇರಿನ ಬಂಡವಾಳವಾಗಿ ತೋರಿಸಲಾಗಿದೆ.

6. ನಿಗಮದ ಅಧಿಕೃತ ಷೇರು ಬಂಡವಾಳವು ರೂ. 200.00 ಕೋಟಿಗಳು ಹಾಗೂ ಮೆ:ಎಂ.ಎಂ.ಎಲ್. ಸಂಸ್ಥೆಯ ಷೇರು ಬಂಡವಾಳ ರೂ. 250.00 ಕೋಟಿ ಆಗುವುದರಿಂದ ಇದು ನಿಗಮದ ಅಧಿಕೃತ ಷೇರು ಬಂಡವಾಳಕ್ಕಿಂತ ಹೆಚ್ಚಾಗಿ ಮೆ: ಎಂ.ಎಂ.ಎಲ್ Holding Company ಆಗುತ್ತದೆ. ನಿಗಮವು ಮೆ: ಎಂ.ಎಂ.ಎಲ್. ಸಂಸ್ಥೆಗೆ Subsidiary ಕಂಪನಿ ಆಗುತ್ತದೆ ಮತ್ತು ನಿಗಮದ ಷೇರು ಬಂಡವಾಳವನ್ನು ರೂ. 510.00 ಕೋಟಿಗೆ ಹೆಚ್ಚಿಸಿದರೆ ನಿಗಮದ ಪಾಲು ಶೇ.51 ರಷ್ಟು ಹಾಗೂ ಮೆ: ಎಂ.ಎಂ.ಎಲ್. ಸಂಸ್ಥೆಯ ಪಾಲು ಶೇ. 49 ರಷ್ಟು ಆಗುತ್ತದೆ. (ಅನುಪಾತ 51:49 ರಂತೆ)

7. ಪ್ರಸ್ತುತ ನಿಗಮವು 2007-08ನೇ ಸಾಲಿನಿಂದ ಯಾವುದೇ ಆರ್ಥಿಕ ಸಂಸ್ಥೆಗಳಿಂದ ಸಾಲವನ್ನು ಪಡೆದಿರುವುದಿಲ್ಲ. ಆದ್ದರಿಂದ, Optimal Share Capital ಅನ್ನು ಲೆಕ್ಕ ಹಾಕಲು ಗಣನೆಗೆ ತೆಗೆದುಕೊಳ್ಳುವ ಸಂಭವವಿರುವುದಿಲ್ಲ. ಒಂದು ವೇಳೆ Optimal Share Capital ಅನ್ನು ಗಣನೆಗೆ ತೆಗೆದುಕೊಳ್ಳುವ ಸಂದರ್ಭ ಒದಗಿದ್ದಲ್ಲಿ ಸರ್ಕಾರದ ಸಹಮತಿಯೊಂದಿಗೆ ರೂ.

1500.00 ಕೋಟಿಗಳಿಗೆ ಹೆಚ್ಚಿಸಲು Debt Equity Ratio ಅನುಸಾರ ಕೋರಲಾಗುವುದೆಂದು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ತಿಳಿಸಿರುತ್ತದೆ.

8. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ನಿಗಮದ ಅಧಿಕೃತ ಷೇರು ಬಂಡವಾಳವನ್ನು ರೂ. 200.00 ಕೋಟಿಯಿಂದ ರೂ. 510.00 ಕೋಟಿಗೆ ಹೆಚ್ಚಿಸಲು ಆದೇಶ ಹೊರಡಿಸುವುದು ಮತ್ತು ಸ್ಟಾಂಪ್ ಶುಲ್ಕ ಒಂದು ಕೋಟಿಗೆ ರೂ. 55,000/–ರಂತೆ ರೂ. 310.00 ಕೋಟಿಗೆ ರೂ. 1,70,50,000/–ಗಳನ್ನು ಪಾವತಿಸಬೇಕಾಗಿದ್ದು, ಇದಕ್ಕಾಗಿ ಅನುದಾನವನ್ನು ಬಿಡುಗಡೆ ಮಾಡುವಂತೆ ಪ್ರಸ್ತಾವನೆಯಲ್ಲಿ ಕೋರಲಾಗಿದೆ.

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಲಾಗಿದೆ :

ಸರ್ಕಾರದ ಆದೇಶ ಸಂಖ್ಯೆ : ಲೋಇ 141 ಇಎಪಿ 2009 ಬೆಂಗಳೂರು ದಿ : 21–04–2010

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಅಧಿಕೃತ ಈಕ್ವಿಟಿ ಷೇರು ಬಂಡವಾಳವನ್ನು ರೂ. 510.00 ಕೋಟಿಗಳಿಗೆ ಹೆಚ್ಚಿಸುವ ಬಗ್ಗೆ ಕೆಳಗಿನಂತೆ ಆದೇಶಿಸಲಾಗಿದೆ.

i. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಅಧಿಕೃತ ಷೇರು ಬಂಡವಾಳವನ್ನು ರೂ. 200.00 ಕೋಟಿಗಳಿಂದ ರೂ. 510.00 ಕೋಟಿಗಳಿಗೆ ಹೆಚ್ಚಿಸಲಾಗಿದೆ.

ii. ಕಂಪನಿಯಲ್ಲಿ ರೂ. 485 ಕೋಟಿಗಳ ಈಕ್ವಿಟಿ ಷೇರು ಬಂಡವಾಳದ ವಿರುದ್ಧವಾಗಿ ಸರ್ಕಾರವು ನೀಡಿರುವ ಮುಂಗಡದಲ್ಲಿ ರೂ. 60.00 ಕೋಟಿಗಳನ್ನು ಪರಿವರ್ತನೆ ಮಾಡಲು ಆದೇಶಿಸಲಾಗಿದೆ.

iii. ಹೆಚ್ಚುವರಿಯಾದ ರೂ. 310 ಕೋಟಿಗಳಿಗೆ ರೂ. 1,70,50.000 ಗಳ ಸ್ಟಾಂಪ್ ಶುಲ್ಕವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಒದಗಿಸಿರುವ ಮತ್ತು ಲಭ್ಯವಿರುವ ಮೊತ್ತದ ಮೇಲಿನ ಬಡ್ಡಿಯ ಹಣದಿಂದ ಭರಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಅನುಮೋದನೆ ನೀಡಲಾಗಿದೆ.

ಮೇಲಿನ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಲೋಇ 108 ಎಫ್‌ಸಿ–1/2010 ದಿನಾಂಕ : 05–03–2010 ರಲ್ಲಿನ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ದೇವಿಪ್ರಸಾದ್

ಸರ್ಕಾರದ ಅಧೀನ ಕಾರ್ಯದರ್ಶಿ,

1108 ಲೋಕೋಪಯೋಗಿ, ಬಂದರು ಹಾಗೂ

ಒಳನಾಡು ಜಲ ಸಾರಿಗೆ ಇಲಾಖೆ (ಇಎಪಿ)

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿ–17ರ ಭಾಗವಾದ ಬೆಂಗಳೂರು–ಮದ್ದೂರು ನಾಲ್ಕು ಪಥದ ರಸ್ತೆಯನ್ನು ವರ್ಷಾಸನ ಆಧಾರದ ಮೇಲೆ (ಆನ್ಯೂಟಿ ಸ್ಕೀಮ್) ಕೈಗೊಂಡಿರುವ ಮೆ: ಬೃಂದಾವನ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಲಿ. ರವರಿಗೆ 8ನೇ ಅರ್ಧ ವರ್ಷಾಸನವನ್ನು ಪಾವತಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ : ಲೋಇ/96/ಇಎಪಿ/2003 ದಿನಾಂಕ : 15–03–2003.
2) ಕನ್ಸಿಷನ್ ಅಗ್ರಿಮೆಂಟ್ ದಿನಾಂಕ : 22–01–2004
3) ಸರ್ಕಾರದ ಆದೇಶ ಸಂಖ್ಯೆ : ಲೋಇ:59:ಇಎಪಿ:2009 (ಪಿ) ದಿನಾಂಕ : 08–10–2009
4) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ: ಕೆ.ಆರ್.ಡಿ.ಸಿ.ಎಲ್/ಎಂಡಿ/2009–10/3165 ದಿನಾಂಕ : 20–03–2010

ಪ್ರಸ್ತಾವನೆ :

ಓದಲಾದ (1) ರಲ್ಲಿನ ಸರ್ಕಾರಿ ಆದೇಶದಲ್ಲಿ, ಬೆಂಗಳೂರು–ಮೈಸೂರು ರಾಜ್ಯ ಹೆದ್ದಾರಿ–17ನ್ನು ನಾಲ್ಕು ಪಥದ ರಸ್ತೆಯನ್ನಾಗಿ ಪರಿವರ್ತಿಸುವಲ್ಲಿನ ಬೆಂಗಳೂರಿನಿಂದ ಮದ್ದೂರುವರೆಗೆ ಇರುವ ಮೊದಲನೇ ಪ್ಯಾಕೇಜ್ ಗುತ್ತಿಗೆಯನ್ನು ಮೆ: ಕೆ.ಎಂ.ಸಿ ಕನ್‌ಸ್ಟ್ರಕ್ಷನ್ಸ್, ಮೆ: ನಾಗಾರ್ಜುನ ಕನ್‌ಸ್ಟ್ರಕ್ಷನ್ಸ್ ಲಿ. ಮತ್ತು ಮೆ : ಮೈಟಾಸ್ ಕನ್‌ಸ್ಟ್ರಕ್ಷನ್ಸ್ ಕಂಪನಿ (ಜೆ.ವಿ.) ಇವರಿಗೆ

ವಹಿಸಿದ್ದು, ಅರ್ಧವಾರ್ಷಿಕ ಪಾವತಿ ಮೊತ್ತವಾದ ರೂ. 29.70 ಕೋಟಿ ಯೋಜನೆಯು ಮುಗಿದ ಮೇಲೆ ಎಂಟು ವರ್ಷಗಳು ಪಾವತಿ ಮಾಡಲು ಆದೇಶ ಹೊರಡಿಸಲಾಗಿತ್ತು.

ಓದಲಾದ (2) ರಲ್ಲಿನ ದಿನಾಂಕದಂದು ಮೆ: ಬೃಂದಾವನ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಲಿಮಿಟೆಡ್ (ಕನ್ಸೆಷನೈರ್) ಹೆಸರಿನಲ್ಲಿ ಸ್ಪೆಷಲ್ ಪ್ರಾಜೆಕ್ಟ್ ವೆಹಿಕಲ್‌ನಂತೆ ಕನ್ಸೆಷನ್ ಅಗ್ರಿಮೆಂಟ್ ಮಾಡಿಕೊಳ್ಳಲಾಗಿದೆ.

ಓದಲಾದ (3) ರಲ್ಲಿನ ಸರ್ಕಾರಿ ಅದೇಶ ದಿನಾಂಕ : 08-10-2009 ರಲ್ಲಿ ಏಳನೇ ಅನ್ಯೂಟಿ ಮೊತ್ತವಾದ ರೂ. 29.70 ಕೋಟಿಗಳನ್ನು ಮೆ: ಬೃಂದಾವನ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಲಿಮಿಟೆಡ್‌ರವರಿಗೆ ಪಾವತಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಿ ಅದೇಶ ಹೊರಡಿಸಲಾಗಿತ್ತು. ದಿನಾಂಕ : 21-10-2006 ರಿಂದ ದಿನಾಂಕ : 08-10-2009 ರವರೆಗೆ ಒಟ್ಟು 7 ಕಂತುಗಳ ಅನ್ಯೂಟಿ ಮೊತ್ತವಾದ ರೂ. 29.70 ಕೋಟಿಗಳನ್ನು ಸದರಿ ಕಂಪನಿಗೆ ಪಾವತಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲಾಗಿದೆ.

ಓದಲಾದ (4) ರಲ್ಲಿನ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ದಿನಾಂಕ : 20-03-2010 ರ ಪತ್ರದಲ್ಲಿ ಮೆ: ಬೃಂದಾವನ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಲಿಮಿಟೆಡ್‌ರವರಿಗೆ ಎಂಟನೇ ಕಂತಿನ ಮೊತ್ತವಾದ ರೂ. 29.70 ಕೋಟಿಗಳನ್ನು ದಿನಾಂಕ : 20-04-2010ರೊಳಗೆ ಪಾವತಿಸಬೇಕಾಗಿರುವುದರಿಂದ ರೂ. 29.70 ಕೋಟಿ ಹಣವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದವರಿಗೆ ಬಿಡುಗಡೆ ಮಾಡುವಂತೆ ಕೋರಿರುವರು.

ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ : ಲೋಇ 41 ಇಎಪಿ 2010 ಬೆಂಗಳೂರು, ದಿನಾಂಕ : 20-04-2010

ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯ ಭಾಗವಾದ ಬೆಂಗಳೂರು-ಮದ್ದೂರನ್ನು ನಾಲ್ಕು ಪಥದ ರಸ್ತೆಯನ್ನಾಗಿ ಪರಿವರ್ತಿಸುವ ಕಾಮಗಾರಿಯನ್ನು ಕೈಗೊಂಡು ಮುಗಿಸಲಾದ ಮೆ:ಬೃಂದಾವನ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಲಿಮಿಟೆಡ್‌ರವರಿಗೆ ಪಾವತಿಸಬೇಕಾದ ಎಂಟನೇ ಅನ್ಯೂಟಿ ಮೊತ್ತವಾದ (ಅರ್ಧ ವಾರ್ಷಿಕ ಪಾವತಿ) 29.70 ಕೋಟಿ ರೂಪಾಯಿಗಳನ್ನು (ಇಪ್ಪತ್ತೊಂಬತ್ತು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ) ಲೆಕ್ಕ ಶೀರ್ಷಿಕೆ 5054-80-190-0-01-132 (ಯೋಜನೆ) ಅಡಿಯಲ್ಲಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲು ಆದೇಶ ಹೊರಡಿಸಲಾಗಿದೆ.

ಮುಂದುವರೆದು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ರೂ. 29.70 (ಇಪ್ಪತ್ತೊಂಬತ್ತು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ) ಕೋಟಿಗಳ ಬಿಲ್ಲನ್ನು ಕೆ.ಎಫ್.ಸಿ. 17(ಎ) (II) ಸಿ. ರಲ್ಲಿನಂತೆ ಮಹಾಲೇಖಪಾಲರಿಂದ (ಎ ಅಂಡ್ ಇ) ಇವರಿಂದ ಆಥರೈಸೇಷನ್ ಇಲ್ಲದೆಯೇ ಮನ್ನಣೆ ಮಾಡುವುದು ಹಾಗೂ ಸದರಿ ಬಿಲ್ಲಿನ ಮೊತ್ತಕ್ಕೆ ನಿರ್ದೇಶಕರು (ಆರ್ಥಿಕ) ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ ಇವರ ಮೇಲುರುಜು ಮಾಡಿಸಿ ಈ ಬಿಲ್ಲನ್ನು (ಸ್ವೀಕೃತದ ರಶೀತಿ) ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿಂದ ಡ್ರಾ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಲೋಇ/282/ಅಕೋ-1/10 ದಿನಾಂಕ : 15-04-2010 ರಲ್ಲಿನ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ದೇವಿಪ್ರಸಾದ್
ಸರ್ಕಾರದ ಅಧೀನ ಕಾರ್ಯದರ್ಶಿ,
ಲೋಕೋಪಯೋಗಿ, ಬಂದರು ಹಾಗೂ
ಒಳನಾಡು ಜಲ ಸಾರಿಗೆ ಇಲಾಖೆ (ಇಎಪಿ)

1109

ಜಲಸಂಪನ್ಮೂಲ ಸಚಿವಾಲಯ

ವಿಷಯ : ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಗಂಗೆ ಚಿಕ್ಕಹೊಳೆ ದುರಸ್ತಿ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ :
1) ಸರ್ಕಾರದ ಅದೇಶ ಸಂಖ್ಯೆ : ಸನೀಇ 10 ನಯೋಕಾ 2007 ದಿನಾಂಕ : 13-05-2008
2) ದಿನಾಂಕ : 25-03-2010ರ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ : ಮುಸದ/ತಾಂ.2/ಸಇಂ.2/ಚಿಕ್ಕಮಗಳೂರು/ ಇ-ಟೆಂಡರ್:119/2009-10/1192
3) ದಿನಾಂಕ : 05-04-2010ರ ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ : 24-02-2010ರ ಪತ್ರ ಸಂಖ್ಯೆ ಮುಸದ/ ಆಪ್ತಶಾಖೆ/ ಟೆಂಡರ್/09-10-1455

ಪ್ರಸ್ತಾವನೆ :

ಓದಲಾದ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹೆಚ್ಚಿನ ಆತ್ಮಹತ್ಯೆಗಳು ವರದಿಯಾಗಿರುವ ಜಿಲ್ಲೆಗಳಲ್ಲಿ ರೈತರ ಪುನರ್ವಸತಿಗಾಗಿ ವಿಶೇಷ ಪ್ಯಾಕೇಜಿನಡಿ ರೂ. 9036.00 ಲಕ್ಷ ಮೊತ್ತದಲ್ಲಿ 162 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಈ ಪೈಕಿ ಅಂದಾಜು ಮೊತ್ತದ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಗಂಗೆ ಚಿಕ್ಕಹೊಳೆ ದುರಸ್ತಿ ಕಾಮಗಾರಿಯು ಸೇರಿರುತ್ತದೆ. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರು ನೋಂದಣಿ ಸಂಖ್ಯೆ 453/2008–09 ರಲ್ಲಿ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಹಾಸನ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಈ–ಪ್ರಕ್ಯೂರ್‌ಮೆಂಟ್ ಮುಖಾಂತರ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	24.08.2009
ಕರ್ನಾಟಕ ರಾಜ್ಯ ಪತ್ರ	27.08.2009
ವಿಜಯ ಕರ್ನಾಟಕ ದಿನ ಪತ್ರಿಕೆ	29.08.2009
ಡೆಕ್ಕನ್ ಹೆರಾಲ್ಡ್ ದಿನ ಪತ್ರಿಕೆ	29.08.2009

ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ 13 ಜನ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ ಮೂಲಕ ಟೆಂಡರ್ ಭರಿಸಿರುತ್ತಾರೆ. ಇವರಲ್ಲಿ 9 ಜನ ಗುತ್ತಿಗೆದಾರರು ಇ.ಎಂ.ಡಿ ಸಲ್ಲಿಸದ ಕಾರಣ ಇವರ ಟೆಂಡರ್ ತಿರಸ್ಕರಿಸಿದ್ದು. ಉಳಿದ 4 ಜನ ಗುತ್ತಿಗೆದಾರರು ತಾಂತ್ರಿಕ ಬಿಡ್‌ನಲ್ಲಿ ಭಾಗವಹಿಸಿದ್ದು ಇವರಲ್ಲಿ 3 ಜನ ಗುತ್ತಿಗೆದಾರರು ಅನರ್ಹರಾದ ಕಾರಣ ಕ್ರಮಬದ್ಧವಾದ ಒಬ್ಬ ಗುತ್ತಿಗೆದಾರರು ಆರ್ಥಿಕ ಬಿಡ್‌ಗಳನ್ನು ಪರಿಗಣಿಸಲಾಗಿದೆ. ಸದರಿ ಗುತ್ತಿಗೆದಾರರು ಅರ್ಹರೆಂದು ಪರಿಗಣಿಸಿ ಇವರ ಅರ್ಥಿಕ ಬಿಡ್‌ಗಳನ್ನು ತೆರೆದಿರುತ್ತಾರೆ. ಇವರ ಟೆಂಡರನ್ನು ದಿನಾಂಕ : 29.12.2009 ರಂದು ತೆರೆಯಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 85,91,848/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಹೆಚ್.ಎಂ. ರಾಮೇಗೌಡ, 1ನೇ ದರ್ಜೆ ಗುತ್ತಿಗೆದಾರರು	94,25,621/–	9.70 ಹೆಚ್ಚು

ಮೇಲ್ಕಂಡಂತೆ ಏಕೈಕ ಅರ್ಹ ಟೆಂಡರ್‌ದಾರರಾದ ಶ್ರೀ ಹೆಚ್. ಎಂ. ರಾಮೇಗೌಡ, 1ನೇ ದರ್ಜೆ ಗುತ್ತಿಗೆದಾರರು ಇವರು ನಮೂದಿಸಿರುವ ದರಗಳಂತೆ ಟೆಂಡರ್ ಮೊತ್ತವು ರೂ. 94,25,621/– ಗಳಾಗಿದ್ದು, ಈ ಮೊತ್ತವನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಗಣಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇ. 9.70 ರಷ್ಟು ಹೆಚ್ಚಾಗಿರುತ್ತದೆ. ಈ ಟೆಂಡರ್‌ನ್ನು ಸಂದಾನದ ಮೂಲಕ ಅಂಗೀಕರಿಸಲು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್ ರವರು ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ : 05–04–2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಮಂಜೂರಾದ ಅಂದಾಜಿನ ದರಗಳ ಹಾಗೂ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 85,91,848/–ಗಳ ಮೇಲೆ ಶೇಕಡ 9.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 93,65,114/–ಗಳಿಗೆ ಕಾಮಗಾರಿಯನ್ನು ಶ್ರೀ ಹೆಚ್. ಎಂ. ರಾಮೇಗೌಡ, ಒಂದನೇ ದರ್ಜೆ ಗುತ್ತಿಗೆದಾರರು. ಇವರಿಗೆ ವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3 ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 25 ಕೆಜಿದು 2010, ಬೆಂಗಳೂರು, ದಿನಾಂಕ : 24ನೇ ಏಪ್ರಿಲ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಗಂಗೆ ಚಿಕ್ಕಹೊಳೆ ದುರಸ್ತಿ ಕಾಮಗಾರಿಯನ್ನು ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗಿಡಲಾದ ಮೊತ್ತ ರೂ. 85,91,848/–ಗಳ ಮೇಲೆ ಶೇಕಡ 9.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 93,65,114/–ಗಳಿಗೆ (ತೊಂಬತ್ತಮೂರು ಲಕ್ಷ ಅರವತ್ತೈದು ಸಾವಿರದ ಒಂದು ನೂರು ಹದಿನಾಲ್ಕು ರೂ.ಗಳು ಮಾತ್ರ) ಶ್ರೀ ಹೆಚ್. ಎಂ. ರಾಮೇಗೌಡ, ಒಂದನೇ ದರ್ಜೆ ಗುತ್ತಿಗೆದಾರರು, ಇವರಿಗೆ ಕೆಳಕಂಡ ಷರತ್ತುಗಳೊಂದಿಗೆ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

08	ಪೊಲೀಸ್ ಆಯುಕ್ತರು, ಬೆಂಗಳೂರು ನಗರ	ಸದಸ್ಯರು
09	ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು	ಸದಸ್ಯರು
10	ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು	ಸದಸ್ಯರು
11	ಯಾವುದೇ ಒಂದು ಸ್ವಯಂ ಸೇವಾ ಸಂಸ್ಥೆಯ ಒಬ್ಬ ಆಹ್ವಾನಿತರು	ಆಹ್ವಾನಿತರು
12	ನಿರ್ದೇಶಕರು, ಅಭಿಯೋಗಗಳು ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1448

ಪಿ. ಶಿವರಾಮ ಭಟ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಅಪರಾಧಗಳು)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಸಣ್ಣ ನೀರಾವರಿ ಇಲಾಖೆಯ ಗ್ರೂಪ್–ಬಿ, ಸಿ ಮತ್ತು ಡಿ ಗುಂಪಿನ ನೌಕರರ ವರ್ಗಾವಣೆಗೆ ಸಂಬಂಧಪಟ್ಟಂತೆ ವೃಂದ ನಿರ್ವಹಣಾ ಪ್ರಾಧಿಕಾರವನ್ನು ಪುನರ್‌ರಚಿಸುವ ಬಗ್ಗೆ.

ಓದಲಾಗಿದೆ: 1. ಸರ್ಕಾರಿ ಆದೇಶ ಸಂಖ್ಯೆ: ಜಸಂಇ 117 ಸೇಎಸು 2002 ದಿನಾಂಕ: 15–05–2002.

2, ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 11 ಸೇನೌವ 2010 ದಿನಾಂಕ: 13–05–2010.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ: 15–05–2002ರ ಸರ್ಕಾರಿ ಆದೇಶದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ವೃಂದದ ಅಧಿಕಾರಿ/ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ಪರಿಶೀಲಿಸಲು ವೃಂದ ನಿರ್ವಹಣಾ ಪ್ರಾಧಿಕಾರವನ್ನು ರಚಿಸಲಾಗಿದೆ. ಸದರಿ ಆದೇಶದಲ್ಲಿ ಗ್ರೂಪ್–ಬಿ, ಸಿ ಮತ್ತು ಡಿ ಗುಂಪಿನ ನೌಕರರ ವರ್ಗಾವಣೆ ಬಗ್ಗೆ ಈ ಕೆಳಕಂಡಂತೆ ವೃಂದ ನಿರ್ವಹಣಾ ಪ್ರಾಧಿಕಾರವನ್ನು ರಚಿಸಲಾಗಿದೆ.

ಅ) ಪ್ರಧಾನ ಇಂಜಿನಿಯರ್ ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ – ಅಧ್ಯಕ್ಷರು

ಆ) ಸಂಬಂಧಪಟ್ಟ ಮುಖ್ಯ ಇಂಜಿನಿಯರ್
ಸಣ್ಣ ನೀರಾವರಿ (ದಕ್ಷಿಣ) ವಲಯ ಮತ್ತು (ಉತ್ತರ) ವಲಯ – ಅಧ್ಯಕ್ಷರು

ಇ) ನಿಬಂಧಕರು ಮುಖ್ಯ ಇಂಜಿನಿಯರ್‌ರವರ ಕಚೇರಿ
ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು – ಸಂಚಾಲಕರು

2010–11ನೇ ಸಾಲಿನಲ್ಲಿ ಮಾಡುವ ಸರ್ಕಾರಿ ನೌಕರರ ವರ್ಗಾವಣೆ ಬಗ್ಗೆ ಮಾರ್ಗಸೂಚಿಗಳನ್ನು ಮೇಲೆ (2)ರಲ್ಲಿ ಓದಲಾದ ಆದೇಶದಲ್ಲಿ ನೀಡಲಾಗಿದೆ. ಸದರಿ ಮಾರ್ಗಸೂಚಿ ಪ್ರಕಾರ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಪಟ್ಟಂತೆ ಎರಡು ವಲಯಗಳ ಮುಖ್ಯ ಇಂಜಿನಿಯರ್‌ಗಳ ಅಧೀನದಲ್ಲಿ ಬರುವ ಕಚೇರಿಗಳ ಸಿಬ್ಬಂದಿಗಳ ವರ್ಗಾವಣೆಗೆ ಸಂಬಂಧಪಟ್ಟಂತೆ ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿರುವ ವೃಂದ ನಿರ್ವಹಣಾ

ಪ್ರಾಧಿಕಾರ ಸಮಿತಿಯಲ್ಲಿ ನಿರ್ಣಯ ತೆಗೆದುಕೊಂಡು ಪ್ರಕರಣಗಳನ್ನು ಪರಿಶೀಲಿಸುವಲ್ಲಿ ವಿಳಂಬವಾಗುತ್ತಿರುವುದರಿಂದ ಎರಡು ವಲಯ ವ್ಯಾಪ್ತಿಯಲ್ಲಿ ಬರುವ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಅವಶ್ಯವಿರುವ ವರ್ಗಾವಣೆಗಳನ್ನು ಮಾಡುವ ಸಲುವಾಗಿ ಎರಡೂ ಸಣ್ಣ ನೀರಾವರಿ ವಲಯದ ಮುಖ್ಯ ಇಂಜಿನಿಯರ್‌ರವರ ಅಧ್ಯಕ್ಷತೆಯಲ್ಲಿ ಗ್ರೂಪ್-ಬಿ.ಸಿ ಮತ್ತು ಡಿ ಗುಂಪಿನ ನೌಕರರ ಆಂತರಿಕ ವರ್ಗಾವಣೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ವೃಂದ ನಿರ್ವಹಣಾ ಪ್ರಾಧಿಕಾರವನ್ನು ಪುನರ್‌ರಚಿಸುವ ಬಗ್ಗೆ ಪರಿಶೀಲಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 38 ಸೇಎಸು 2010, ಬೆಂಗಳೂರು, ದಿನಾಂಕ: 05-06-2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಮೇರೆಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಹಾಗೂ ಉತ್ತರ ವಲಯ, ಬಿಜಾಪುರದ ವ್ಯಾಪ್ತಿಯಲ್ಲಿ ಬರುವ ಕೇಂದ್ರ ಕಛೇರಿ ವೃತ್ತ, ಕಚೇರಿ, ವಿಭಾಗ ಹಾಗೂ ಉಪ ವಿಭಾಗ ಕಚೇರಿಗಳ ಗ್ರೂಪ್-ಬಿ, ಸಿ ಮತ್ತು ಡಿ ವೃಂದದ ನೌಕರರ ವಲಯ ವ್ಯಾಪ್ತಿಯಲ್ಲಿನ ಆಂತರಿಕ ವರ್ಗಾವಣೆಗೆ ಸಂಬಂಧಿಸಿದಂತೆ ಪರಿಶೀಲಿಸಲು ಈ ಕೆಳಕಂಡಂತೆ ವೃಂದ ನಿವೃಹಣಾ ಪ್ರಾಧಿಕಾರವನ್ನು ಪುನರ್‌ರಚಿಸಲಾಗಿದೆ.

ಅ) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದ) ವಲಯ ಇವರ ವ್ಯಾಪ್ತಿಯಲ್ಲಿ ಬರುವ ಅಧೀನ ಕಚೇರಿಗಳ ಗ್ರೂಪ್-ಬಿ, ಸಿ ಮತ್ತು ಡಿ ಗುಂಪಿನ ನೌಕರರ ವರ್ಗಾವಣೆಗೆ ಸಂಬಂಧಿಸಿದಂತೆ ವೃಂದ ನಿರ್ವಹಣಾ ಪ್ರಾಧಿಕಾರ

1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದ) ವಲಯ, ಬೆಂಗಳೂರು – ಅಧ್ಯಕ್ಷರು

2) ಕಾರ್ಯಪಾಲಕ ಇಂಜಿನಿಯರ್, (ವಿನ್ಯಾಸ) ಉಪ ಮುಖ್ಯ ಇಂಜಿನಿಯರ್ – ಸದಸ್ಯರು

3) ನಿಬಂಧಕರು, ಮುಖ್ಯ ಇಂಜಿನಿಯರ್‌ರವರ ಕಚೇರಿ ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು – ಸಂಚಾಲಕರು

ಅ) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರ ವಲಯ ವ್ಯಾಪ್ತಿಯಲ್ಲಿನ ಬರುವ ಗ್ರೂಪ್-ಬಿ, ಸಿ ಮತ್ತು ಡಿ ಗುಂಪಿನ ನೌಕರರ ವರ್ಗಾವಣೆಗೆ ಸಂಬಂಧಪಟ್ಟಂತೆ ವೃಂದ ನಿರ್ವಹಣಾ ಪ್ರಾಧಿಕಾರ.

1) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉ) ವಲಯ – ಅಧ್ಯಕ್ಷರು

2) ಉಪ ಮುಖ್ಯ ಇಂಜಿನಿಯರ್ – ಸದಸ್ಯರು

3) ನಿಬಂಧಕರು, ಮುಖ್ಯ ಇಂಜಿನಿಯರ್‌ರವರ ಕಚೇರಿ ಸಣ್ಣ ನೀರಾವರಿ ಉತ್ತರ ವಲಯ, ವಿಜಾಪುರ – ಸಂಚಾಲಕರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1469

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆ ಮನೆಗಳ ನಿರ್ಮಾಣಕ್ಕಾಗಿ ಲೆಕ್ಕ ಶೀರ್ಷಿಕೆ 8235-00-111-0-02 "Public Contributions to Calamity Relief" ಅಡಿಯಲ್ಲಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: (1) ಸರ್ಕಾರಿ ಆದೇಶ ಸಂಖ್ಯೆ: ಕಂಇ 174 ಟಿಎನ್‌ಆರ್ 2010 ದಿನಾಂಕ: 15-04-2010.

(**2**) ಸರ್ಕಾರದ ಆದೇಶ ಸಂಖ್ಯೆ: ಕಂಇ 174 ಟಿಎನ್‌ಆರ್. 2010 ದಿನಾಂಕ: 06-05-2010.

(**3**) ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಮುಮಕಾ/592/10 ದಿನಾಂಕ: 26-05-2010.

(**4**) ಸರ್ಕಾರದ ಆದೇಶ ಸಂಖ್ಯೆ: ಆಇ 23 ಟಿಎಆರ್ 2009 ದಿನಾಂಕ: 05-12-2009 ಮತ್ತು ದಿನಾಂಕ 06-04-2010.

ಪ್ರಸ್ತಾವನೆ:

ಮೇಲೆ ಓದಲಾದ (1) ಮತ್ತು (2)ರ ಸರ್ಕಾರದ ಆದೇಶಗಳಲ್ಲಿ ಕ್ರಮವಾಗಿ ಆಸರೆ ಯೋಜನೆ ಅಡಿಯಲ್ಲಿ ನೆರೆ ಪೀಡಿತ ಜಿಲ್ಲೆಗಳಲ್ಲಿ ಮನೆ ನಿರ್ಮಾಣಕ್ಕಾಗಿ ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇವರಿಗೆ ಲೆಕ್ಕ ಶೀರ್ಷಿಕೆ

8235–00–111–0–02 "Public Contributions to Calamity Relief" ಯಿಂದ ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ಪಡೆದು ರೂ. 15–00 ಹಾಗೂ 30–00 ಕೋಟಿಗಳನ್ನು ಬಿಡುಗಡೆ ಮಾಡಿ ಆದೇಶಿಸಿದೆ.

ಮೇಲೆ ಓದಲಾದ (3)ರ ಮುಖ್ಯಮಂತ್ರಿಗಳ ಕಾರ್ಯಾಲಯದ ದಿನಾಂಕ: 26–05–2010ರ ಟಿಪ್ಪಣಿಯಲ್ಲಿ ರೂ. 65–00 ಲಕ್ಷಗಳನ್ನು ಮುಖ್ಯ ಮಂತ್ರಿಗಳ ವಿಪತ್ತು ಪರಿಹಾರ ನಿಧಿಯಿಂದ ಬಿಡುಗಡೆ ಮಾಡುವಂತೆ ಆದೇಶಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 174 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ: 01–06–2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆಸರೆ ಯೋಜನೆ ಅಡಿಯಲ್ಲಿ ನೆರೆ ಪೀಡಿತ ಜಿಲ್ಲೆಗಳಲ್ಲಿ ಮನೆಗಳನ್ನು ನಿರ್ಮಾಣ ಮಾಡಲು ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ರೂ. 65–00 ಲಕ್ಷಗಳನ್ನು (ರೂ. ಅರವತ್ತೈದು ಲಕ್ಷಗಳು ಮಾತ್ರ) ಲೆಕ್ಕ ಶೀರ್ಷಿಕೆ 8235–00–111–0–02 "Public Contributions to Calamity Relief" ಅಡಿಯಲ್ಲಿ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಸ್ಥೆಯ ಮುಖ್ಯಸ್ಥರು, ಅನುದಾನದ ಬಿಲ್ (Payees Receipt) ತಯಾರಿಸಿ, ಸರ್ಕಾರದ ಕಾರ್ಯದರ್ಶಿಗಳು (ವಿಪತ್ತು ನಿರ್ವಹಣೆ), ಕಂದಾಯ ಇಲಾಖೆ ಇವರಿಂದ ಮೇಲು ಸಹಿ ಪಡೆದು ಖಜಾನೆಯಿಂದ ಡ್ರಾ ಮಾಡಲು ಸೂಚಿಸಿದೆ.

ಅನುದಾನವನ್ನು ಬಿಡುಗಡೆ ಮಾಡಲಾದ ಉದ್ದೇಶಕ್ಕಾಗಿಯೇ ಉಪಯೋಗಿಸತಕ್ಕದ್ದು ಹಾಗೂ ಅನುದಾನದ ವೆಚ್ಚ ಮಾಡಿದ್ದಕ್ಕೆ ಉಪಯೋಗಿತ ಪ್ರಮಾಣಪತ್ರ ಸಲ್ಲಿಸುವುದು.

ಈ ಆದೇಶವನ್ನು ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಮುಮಕಾ/592/10 ದಿನಾಂಕ 26–05–2010ರ ಆದೇಶದ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1470

ಟಿ. ಗಂಗಾಧರ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ (ವಿ.ನಿ ಮತ್ತು ಸೇವೆಗಳು–2)

ಕಂದಾಯ ಸಚಿವಾಲಯ

ತಿದ್ದುಪಡಿ

ಆರ್‌ಡಿ. 324: ಎಎಸ್‌ಡಿ 2010 ಬೆಂಗಳೂರು, ದಿನಾಂಕ: 07.06.2010

ಸರ್ಕಾರದ ಆದೇಶ ಸಂ:ಆರ್ ಡಿ 22 ಎಎಸ್ ಡಿ 2007, ದಿನಾಂಕ: 19–08–2009ರಲ್ಲಿನ ಕ್ರ.ಸಂ: 6ರಲ್ಲಿರುವ ಶ್ರೀ ಎಸ್.ಸಿ. ಹನುಮಿನಾಳ್ ಇವರಿಗೆ ಸ್ವಯಂ ಚಾಲಿತ ವೇತನ ಬಡ್ತಿ ಮಂಜೂರಾತಿ ನೀಡಿದ ದಿನಾಂಕ: 09–01–1992 ಎಂಬುವುದರ ಬದಲಾಗಿ '11–04–1992' ಎಂದು ತಿದ್ದಿಕೊಂಡು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1449

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ. (ಸೇವೆಗಳು–3)

ಕಂದಾಯ ಸಚಿವಾಲಯ

ವಿಷಯ : ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ವೆಬ್ ಆಧಾರಿತ ನೂತನ ಕಾವೇರಿ ತಂತ್ರಾಂಶ ಅಭಿವೃದ್ಧಿಪಡಿಸುವ ಸಂಬಂಧ ಗುತ್ತಿಗೆದಾರರ ಆಯ್ಕೆಗಾಗಿ ಟೆಂಡರ್ ಕರೆಯುವ ಕುರಿತು.

ಓದಲಾಗಿದೆ :ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ: ಅಠಟಠ; 06:2008–09, ದಿನಾಂಕ: 02.01.2010.

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ: 02.01.2010ರ ಪತ್ರದಲ್ಲಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರು ವೆಬ್ ಆಧಾರಿತ ನೂತನ ಕಾವೇರಿ ತಂತ್ರಾಂಶ ಅಭಿವೃದ್ಧಿಪಡಿಸುವುದಕ್ಕಾಗಿ ಮೆ: ಕಘಅ ತಂತ್ರಜ್ಞರು ಅಧ್ಯಯನ ಕೈಗೊಂಡು ತಯಾರಿಸಿ ನೀಡಿರುವ ಟೆಂಡರ್ ದಸ್ತಾವೇಜನ್ನು ಸಮಗ್ರವಾಗಿ ಪರಿಶೀಲಿಸಿ ಅನುಮೋದಿಸುವ ಹಾಗೂ ಟೆಂಡರ್ ಕರೆಯಲು ದಿನಾಂಕ ಗೊತ್ತುಪಡಿಸುವುದಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ. ಕಂಇ 190 ಮುನೋಮು 2009, ದಿನಾಂಕ

14.12.2009ರನ್ವಯ ರಚಿಸಲ್ಪಟ್ಟಿರುವ ಚಾಲನಾ ಸಮಿತಿ ಸಭೆಯನ್ನು ಶೀಘ್ರವಾಗಿ ಕರೆಯಲು ಕೋರಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000ರ ನಿಯಮ 17(ಬಿ) ಪ್ರಕಾರ ಒಟ್ಟು ಯೋಜನಾ ವೆಚ್ಚ ರೂ.2 ಕೋಟಿಗಿಂತ ಹೆಚ್ಚಾಗಿದ್ದಲ್ಲಿ 60 ದಿನಗಳ ನೋಟೀಸು ನೀಡಬೇಕಾಗಿರುತ್ತದೆ. ಸದರಿ ನಿಯಮಗಳ ನಿಯಮ 17(2) ರಲ್ಲಿ ನೋಟೀಸು ಸಮಯವನ್ನು ಕಡಿತಗೊಳಿಸುವ ಅಧಿಕಾರವನ್ನು ಟೆಂಡರ್ ಕರೆಯುವ ಅಧಿಕಾರಿಗಿಂತ ಮೇಲ್ಪಟ್ಟ ಅಧಿಕಾರಿಗೆ ನೀಡಲಾಗಿರುತ್ತದೆ. ನೂತನ ಕಾವೇರಿ ಯೋಜನೆಯ ಅಂದಾಜು ಯೋಜನಾ ವೆಚ್ಚ ರೂ.30 ಕೋಟಿ ಆಗಿರುತ್ತದೆ. ಪ್ರಸ್ತುತ ತಂತ್ರಾಂಶವು 2003ರಲ್ಲಿ ಅಭಿವೃದ್ಧಿಗೊಳಿಸಲ್ಪಟ್ಟಿರುತ್ತದೆ. ಕಾವೇರಿ ಯೋಜನೆಗಾಗಿ ಉಪಯೋಗಿಸಲ್ಪಡುತ್ತಿರುವ ಹಾರ್ಡ್‌ವೇರ್ ಗಳು ಸತತ 6 ವರ್ಷಗಳ ಉಪಯೋಗದಿಂದ ಕಾರ್ಯಕ್ಷಮತೆಯನ್ನು ಕಳೆದುಕೊಂಡಿದ್ದು, ಅವುಗಳಲ್ಲಿ ಆಗಾಗ್ಗೆ ನ್ಯೂನತೆಗಳು ಉಂಟಾಗಿ ನೋಂದಣಿ ಕಾರ್ಯಗಳಲ್ಲಿ ತೊಂದರೆ ಕಂಡು ಬರುತ್ತಿರುತ್ತವೆ. ಆದ್ದರಿಂದ ನೂತನ ತಂತ್ರಾಂಶದೊಂದಿಗೆ ನೂತನ ಹಾರ್ಡ್‌ವೇರ್‌ಗಳನ್ನು ಬೇಗ ಅಳವಡಿಸಿಕೊಳ್ಳುವುದು ಅತ್ಯವಶ್ಯವಿರುವುದರಿಂದ ಟೆಂಡರ್ ನೋಟೀಸಿನ ಅವಧಿಯನ್ನು 30 ದಿನಗಳಿಗೆ ನಿಗದಿಪಡಿಸಿ ಸೂಕ್ತ ಆದೇಶ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 11 ಮುನೋಮು 2010, ಬೆಂಗಳೂರು, ದಿನಾಂಕ: 29.05.2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ವೆಬ್ ಆದಾರಿತ ನೂತನ ಕಾವೇರಿ ತಂತ್ರಾಂಶವನ್ನು ಅಂದಾಜು ರೂ.30.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಅಭಿವೃದ್ಧಿ ಪಡಿಸುವ ಸಂಬಂಧ ಗುತ್ತಿಗೆದಾರರ ಆಯ್ಕೆಗಾಗಿ ಟೆಂಡರ್ ಕರೆಯಲು ನೋಟಿಫಿಕೇಷನ್ ಅವಧಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ನಿಯಮಗಳು, 2000ರ ನಿಯಮ 17(2) ರ (ಕೆ.ಪಿ.ಟಿ.ಪಿ.) ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 30 ದಿನಗಳಿಗೆ ನಿಗಧಿಪಡಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1450

ಟಿ.ಕೆ.ರಾಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ನೋಂದಣಿ ಮತ್ತು ಮುದ್ರಾಂಕ)

ಸಹಕಾರ ಸಚಿವಾಲಯ

ವಿಷಯ : ಅಖಿಲ ವೀರಶೈವ ಮಂಡಳಿ, ನಂಜನಗೂಡು, ಈ ಸಂಘಕ್ಕೆ ಆಡಳಿತಾಧಿಕಾರಿಗಳ ಅವಧಿ ವಿಸ್ತರಣೆ ಮತ್ತು ಬದಲಾವಣೆ ಮಾಡಿಕೊಡುವ ಬಗ್ಗೆ

ಓದಲಾಗಿದೆ : (1) ಸರ್ಕಾರಿ ಆದೇಶ ದಿನಾಂಕ: 30-11-2009.

(**2**) ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಹಾಗೂ ಆಡಳಿತಾಧಿಕಾರಿ, ಅಖಿಲ ವೀರಶೈವ ಮಂಡಳಿ ನಂಜನಗೂಡು ಇವರ ಪತ್ರ ಸಂಖ್ಯೆ: ಜೆಆರ್‌ಎಂ/ಆಡಳಿತ/ಎಸ್-6/ಎಸ್‌ಆರ್‌ಓ/258/2009-10, ದಿನಾಂಕ: 21-04-2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಆದೇಶದಲ್ಲಿ ಅಖಿಲ ವೀರಶೈವ ಮಂಡಳಿ, ನಂಜನಗೂಡು ಈ ಸಂಘದಲ್ಲಿ ಹಣಕಾಸಿನ ದುರುಪಯೋಗ ತಡೆದು ಸ್ಥಿರ ಹಾಗೂ ಚಿರಾಸ್ಥಿಗಳನ್ನು ರಕ್ಷಿಸುವ ಸಲುವಾಗಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ ಮೈಸೂರು ರವರನ್ನು ಆರು (6) ತಿಂಗಳ ಅವಧಿಗೆ ಆಡಳಿತಾಧಿಕಾರಿಗಳನ್ನಾಗಿ ನೇಮಿಸಲಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ದಿನಾಂಕ 21-04-2010 ರ ಪತ್ರದಲ್ಲಿ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ ಮೈಸೂರು, ಹಾಗೂ ಆಡಳಿತಾಧಿಕಾರಿ ಅಖಿಲ ವೀರಶೈವ ಮಂಡಳಿ ನಂಜನಗೂಡು ಇಲ್ಲಿಗೆ ಆಡಳಿತಾಧಿಕಾರಿಯಾಗಿ ನೇಮಿಸಿದ್ದರ ಹಿನ್ನೆಲೆಯಲ್ಲಿ ಆದೇಶದ ರೀತ್ಯಾ ದಿನಾಂಕ: 15/12/2009 ರಂದು ಸಂಸ್ಥೆಯ ಆಡಳಿತಾಧಿಕಾರಿಯಾಗಿ ಪ್ರಭಾರ ವಹಿಸಿಕೊಂಡು ಕರ್ತವ್ಯ ನಿರ್ವಹಿಸುತ್ತಿದ್ದು. ಆದರೆ, ಮೈಸೂರು ಪ್ರಾಂತಕ್ಕೆ ಎಂಟು (8) ಜಿಲ್ಲೆಗಳು ಒಳಗೊಂಡಿದ್ದು ಈ ಜಿಲ್ಲೆಗಳಲ್ಲಿ ಸರ್ಕಾರದ ಹಾಗೂ ಸಹಕಾರ ಇಲಾಖೆಯ ಕಾರ್ಯಕ್ರಮಗಳ ಅನುಷ್ಠಾನ ಕುರಿತಂತೆ ಉಸ್ತುವಾರಿ ನೋಡಿಕೊಳ್ಳುವುದು ಮತ್ತು ಸಹಕಾರ ವ್ಯಾಜ್ಯಗಳ ವಿಚಾರಣೆಯನ್ನು ಸಹ ನಡೆಸುತ್ತಿರುವುದರಿಂದ ಸದರಿ ಆಡಳಿತಾಧಿಕಾರಿಗಳ ಸ್ಥಾನದಿಂದ ಬದಲಾಯಿಸಿ ಆ ಸ್ಥಾನಕ್ಕೆ ಸಹಕಾರ ಅಭಿವೃದ್ಧಿ ಅಧಿಕಾರಿ, ನಂಜನಗೂಡು ರವರನ್ನು ನೇಮಿಸಿಕೊಡಬೇಕೆಂದು ದಿನಾಂಕ: 09-03-2010ರ ಪತ್ರದಲ್ಲಿ ಕೋರಿರುವುದಾಗಿ ವರದಿ ಮಾಡಿರುತ್ತಾರೆ. ಅವರ ಕೋರಿಕೆಯನ್ನು ಸರ್ಕಾರ ದಿನಾಂಕ 16-04-2010 ರ ಪತ್ರದಲ್ಲಿ ತಿರಸ್ಕರಿಸಲಾಗಿದೆ.

ಪ್ರಸ್ತುತ ಆಡಳಿತಾಧಿಕಾರಿಗಳ ಅವಧಿಯು ದಿನಾಂಕ: 14-05-2010ಕ್ಕೆ ಪೂರ್ಣಗೊಂಡಿದ್ದು, ಅವಧಿ ಮುಗಿಯುವುದಕ್ಕೆ ಮುಂಚಿತವಾಗಿ ಆಡಳಿತ ಮಂಡಳಿಯ ಚುನಾವಣೆಯನ್ನು ನಡೆಸಿ ನೂತನ ಆಡಳಿತ ಮಂಡಳಿಗೆ ಪ್ರಭಾರವನ್ನು ವಹಿಸಿಕೊಡಲು ಮೇಲೆ ತಿಳಿಸಿದ ಆಡಳಿತಾತ್ಮಕ ಕಾರಣಗಳಿಂದ ಸಾಧ್ಯವಾಗಿಲ್ಲವಾದ್ದರಿಂದ ದಿನಾಂಕ 15-05-2010 ರಿಂದ ಮತ್ತೆ 6 ತಿಂಗಳ

ಅವಧಿಗೆ ಆಡಳಿತಾಧಿಕಾರಿಗಳ ಅವಧಿಯನ್ನು ವಿಸ್ತರಿಸಿ, ಜಂಟಿ ನಿಬಂಧಕರು, ಮೈಸೂರು ಪ್ರಾಂತ್ಯ, ಮೈಸೂರು ಇವರ ಬದಲಿಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪವಿಭಾಗ ಮೈಸೂರು ಇವರನ್ನು ನೇಮಿಸುವಂತೆ ಕೋರಿರುತ್ತಾರೆ.

ಸರ್ಕಾರವು ಪ್ರಕರಣಕ್ಕೆ ಸಂಬಂಧಿಸಿದಂತೆ ಆಡಳಿತಾಧಿಕಾರಿಯು ಸಲ್ಲಿಸಿರುವ ವರದಿಯನ್ನು ಹಾಗೂ ಸಂಬಂಧಿಸಿದ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಇ 37 ಸಿಎಸ್ಆರ್ 2009, ಬೆಂಗಳೂರು, ದಿನಾಂಕ 05/06/2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅಖಿಲ ವೀರಶೈವ ಮಂಡಳಿ, ನಂಜನಗೂಡು ಈ ಸಂಸ್ಥೆಗೆ ನೇಮಿಸಲಾದ ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ರವರ ಬದಲಾಗಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪವಿಭಾಗ, ಮೈಸೂರು ರವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ದಿನಾಂಕ 15–05–2010 ರಿಂದ ಮತ್ತೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ಕಲಂ 27(ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರು (6) ತಿಂಗಳ ಅವಧಿಗೆ ಅಥವಾ ಸದರಿ ಸಂಸ್ಥೆಗೆ ಚುನಾವಣೆ ನಡೆಸಿ ನೂತನ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಘದಲ್ಲಿ ಹಾಲಿ ನೋಂದಾಯಿತವಾಗಿರುವ ಸದಸ್ಯರುಗಳಿಂದ ಚುನಾವಣೆ ನಡೆಸಿ ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1451

ನಂಜುಂಡಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಹಕಾರ ಇಲಾಖೆ

ಆರ್ಥಿಕ ಸಚಿವಾಲಯ

ಸುತ್ತೋಲೆ

ಸಂಖ್ಯೆ: ಆಇ 01 ಬಿಇಎಂ 2008 ಬೆಂಗಳೂರು, ದಿನಾಂಕ: 26.05.2010

ಇದೇ ಸಮ ಸಂಖ್ಯೆಯ ಸುತ್ತೋಲೆ ದಿನಾಂಕ:21.10.2009ರ ಕ್ರಮ ಸಂಖ್ಯೆ: 8ರಲ್ಲಿ ವಿಮಾನ ಪ್ರಯಾಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹೊರಡಿಸಲಾಗಿದ್ದ ಮಿತವ್ಯಯ ಆದೇಶವನ್ನು ಸಡಿಲಿಸಿ, ಸಚಿವರು ಮತ್ತು ಸಚಿವ ಸ್ಥಾನಮಾನ ಹೊಂದಿದ ಅಧಿಕಾರೇತರ ಸದಸ್ಯರು, ಸರ್ಕಾರಿ ಅಧಿಕಾರಿಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಎಲ್ಲಾ ಅಧ್ಯಕ್ಷರುಗಳು ಮತ್ತು ಅಧಿಕಾರಿಗಳು ಅವರ ಸ್ಥಾನಮಾನಕ್ಕೆ ಅರ್ಹವಿರುವ ದರ್ಜೆಯಲ್ಲಿ ವಿಮಾನದಲ್ಲಿ ಪ್ರಯಾಣಿಸಲು ಅನುಮತಿಸಲಾಗಿದೆ.

(ಮಾನ್ಯ ಮುಖ್ಯ ಮಂತ್ರಿಯವರಿಂದ ಅನುಮೋದಿತ)

ಜಿ.ವಿ. ಚಂದ್ರಶೇಖರ್
ಸರ್ಕಾರದ ಅಧೀನ ಕಾರ್ಯದರ್ಶಿ
(ವಿತ್ತೀಯ ಸುಧಾರಣೆ & ಗಣಕ ಕೋಶ)
ಆರ್ಥಿಕ ಇಲಾಖೆ

ಪಿ.ಆರ್. 1452

ಕಂದಾಯ ಸಚಿವಾಲಯ

ವಿಷಯ : ಶ್ರೀಮತಿ ಎಂ.ಕೆ. ಉಷಾದೇವಿ, ಕೇಂದ್ರಸ್ಥಾನ ಸಹಾಯಕರು ಇವರ ಸ್ವಯಂ ನಿವೃತ್ತಿ ಕುರಿತು.

ಓದಲಾಗಿದೆ : (1) ಶ್ರೀಮತಿ ಎಂ.ಕೆ. ಉಷಾದೇವಿ, ಕೇಂದ್ರಸ್ಥಾನ ಸಹಾಯಕರು ಇವರ ಮನವಿ ದಿನಾಂಕ: 14.12.2009.

(2) ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರ ಪತ್ರ ಸಂಖ್ಯೆ: ಸಿಬ್ಬಂದಿ–151/2009–10, ದಿನಾಂಕ: 26.03.2010.

(3) ಶ್ರೀಮತಿ ಎಂ.ಕೆ. ಉಷಾದೇವಿ, ಕೇಂದ್ರಸ್ಥಾನ ಸಹಾಯಕರು ಇವರ ಮನವಿ ದಿನಾಂಕ: 24.04.2010.

ಪ್ರಸ್ತಾವನೆ:

ಮೇಲೆ ಓದಲಾದ (1)ರ ದಿನಾಂಕ: 14.12.2009 ರ ಮನವಿಯಲ್ಲಿ ಶ್ರೀಮತಿ ಎಂ.ಕೆ. ಉಷಾದೇವಿ ಕೇಂದ್ರಸ್ಥಾನ ಸಹಾಯಕರು ಇವರು ದಿನಾಂಕ: 01.04.2010 ರಿಂದ ಅನ್ವಯವಾಗುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1957 ರ ಭಾಗ–V ನಿಯಮ 285 (1) (ಬಿ) ರಡಿ ಸ್ವಯಂ ನಿವೃತ್ತಿ ಕೋರಿ ಮನವಿ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2) ರ ದಿನಾಂಕ: 26.03.2010 ರ ಪತ್ರದಲ್ಲಿ ನೋಂದಣಿ ಮಹಾಪರಿವೀಕ್ಷಕರು ಹಾಗೂ ಮುದ್ರಾಂಕಗಳ ಆಯುಕ್ತರವರು ಶ್ರೀಮತಿ ಎಂ.ಕೆ. ಉಷಾದೇವಿ, ಕೇಂದ್ರಸ್ಥಾನ ಸಹಾಯಕರು, ಜಿಲ್ಲಾ ನೋಂದಣಿ ಕಚೇರಿ, ರಾಮನಗರ ಜಿಲ್ಲೆ ಇವರು ತಮ್ಮ ದಿನಾಂಕ: 14.12.2009 ರ ಅರ್ಜಿಯಲ್ಲಿ ಸದರಿಯವರ ಆರೋಗ್ಯದ ದೃಷ್ಟಿಯಿಂದ ಹಾಗೂ ಇತರೆ ಕೌಟುಂಬಿಕ ಕಾರಣಗಳ ಹಿನ್ನೆಲೆಯಲ್ಲಿ ದಿನಾಂಕ: 01.04.2010 ರಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 285(1)(ಬಿ) ಪ್ರಕಾರ ಸ್ವಯಂ ನಿವೃತ್ತಿ ಹೊಂದಲು ಇಚ್ಛಿಸಿರುವುದರಿಂದ ಸದರಿ ದಿನಾಂಕದಿಂದ ಜಾರಿಗೆ ಬರುವಂತೆ ಸ್ವಯಂ ನಿವೃತ್ತಿ ಹೊಂದಲು ಅನುಮತಿ ಕೋರಿದ್ದು, ಇವರ ಸ್ವಯಂ ನಿವೃತ್ತಿಗೆ ಸಂಬಂಧಿಸಿದಂತೆ ಸದರಿ ಅಧಿಕಾರಿಯವರ ವಿರುದ್ಧ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲವೆಂದು ಹಾಗೂ ಯಾವುದೇ ಇಲಾಖಾ ವಿಚಾರಣೆಯನ್ನು ಹೂಡಲು ಉದ್ದೇಶಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅಲ್ಲದೇ ಸದರಿ ಅಧಿಕಾರಿಗಳ ವಿರುದ್ಧ ಸರ್ಕಾರದ ಹಂತದಲ್ಲಿ ಅಥವಾ ಲೋಕಾಯುಕ್ತರ ಹಂತದಲ್ಲಿ ಇಲಾಖಾ ವಿಚಾರಣೆ ಬಗ್ಗೆ ಯಾವುದೇ ಮಾಹಿತಿಯು ಅವರ ಕಛೇರಿಯಲ್ಲಿ ಲಭ್ಯವಿಲ್ಲದಿರುವುದರಿಂದ ಸರ್ಕಾರದ ಹಂತದಲ್ಲಿ ಪರಿಶೀಲಿಸಬಹುದಾಗಿದೆ ಎಂದು ಸಹ ತಿಳಿಸಿರುತ್ತಾರೆ.

ಮುಂದುವರೆದು, ಸದರಿ ಅಧಿಕಾರಿಗೆ ಸಂಬಂಧಿಸಿದಂತೆ ಉಪ ನೋಂದಣಿ ಕಛೇರಿ, ಗೌರಿಬಿದನೂರು, ತುಮಕೂರು, ಕುಣಿಗಲ್ ಮತ್ತು ಜಿಲ್ಲಾ ನೋಂದಣಿ ಕಚೇರಿ, ರಾಮನಗರ ಕಛೇರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಕಛೇರಿಗಳಿಂದ ಸದರಿಯವರಿಂದ ಯಾವುದೇ ಬಾಕಿ ಇರುವುದಿಲ್ಲವೆಂದು ಬೇಬಾಕಿ ಪ್ರಮಾಣ ಪತ್ರಗಳು ಬಂದಿದ್ದು, ಉಪ ನೋಂದಣಿ ಕಛೇರಿ, ಗೌರಿಬಿದನೂರು, ತುಮಕೂರು, ಕುಣಿಗಲ್ ಮತ್ತು ಜಿಲ್ಲಾ ನೋಂದಣಿ ಕಛೇರಿ, ರಾಮನಗರ ಕಛೇರಿಗಳಿಗೆ ಸಂಬಂಧಿಸಿದಂತೆ ಇನ್ನೂ ಪರಿವೀಕ್ಷಣೆ ಆಗಬೇಕಾಗಿದ್ದು, ಆ ಕಚೇರಿಗಳಿಂದ ಬೇಬಾಕಿ ಪ್ರಮಾಣ ಪತ್ರ ಬಂದ ನಂತರ ಸರ್ಕಾರಕ್ಕೆ ಕಳುಹಿಸಲಾಗುವುದೆಂದು ತಿಳಿಸಿರುತ್ತಾರೆ.

ಮೇಲೆ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸದರಿ ಅಧಿಕಾರಿಗಳು ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 285(1) (ಬಿ) ಪ್ರಕಾರ ಸ್ವಯಂ ನಿವೃತ್ತಿ ಹೊಂದಲು ಕನಿಷ್ಠ ಅವಧಿಯನ್ನು ಪೂರೈಸಿರುವುದರಿಂದ ದಿನಾಂಕ: 01.04.2010 ರಿಂದ ಜಾರಿಗೆ ಬರುವಂತೆ ಸ್ವಯಂ ನಿವೃತ್ತಿ ಹೊಂದಲು ಅನುಮತಿ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (3) ರ ದಿನಾಂಕ: 24.04.2010 ರ ಮನವಿಯಲ್ಲಿ ಶ್ರೀಮತಿ ಎಂ.ಕೆ. ಉಷಾದೇವಿ, ಕೇಂದ್ರಸ್ಥಾನ ಸಹಾಯಕರು ಇವರು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 285(1) (ಬಿ) ರನ್ವಯ ಸರ್ಕಾರಿ ಸೇವೆಯಿಂದ ಸ್ವಇಚ್ಛಾ ನಿವೃತ್ತಿಯನ್ನು ದಿನಾಂಕ:01.04.2010ರಿಂದ ಹೊಂದಲು ಕೇಳಿದ್ದು, ನೀತಿ ಸಂಹಿತೆ ಅಡ್ಡಿ ಬಂದಿರುವುದರಿಂದ ದಿನಾಂಕ: 31.05.2010 ರಂದು ಸ್ವಇಚ್ಛಾ ನಿವೃತ್ತಿ ಪಡೆಯಲು ಹಾಗೂ ತತ್ಸಂಬಂಧದ ಇತರೆ ನಿವೃತ್ತಿ ಸೌಲಭ್ಯ ಪಡೆಯಲು ಅನುಕೂಲವಾಗುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಶ್ರೀಮತಿ ಎಂ.ಕೆ. ಉಷಾದೇವಿ, ಕೇಂದ್ರಸ್ಥಾನ ಸಹಾಯಕರು ಇವರ ವಿರುದ್ಧ ಸರ್ಕಾರದ ಹಂತದಲ್ಲಿ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲ ಹಾಗೂ ಹೂಡಲು ಉದ್ದೇಶಿಸಿರುವುದಿಲ್ಲ. ಆದ್ದರಿಂದ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 02 ಮುನೋಸೇ (1) 2010, ಬೆಂಗಳೂರು, ದಿನಾಂಕ31/05/2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಶ್ರೀಮತಿ ಎಂ.ಕೆ. ಉಷಾದೇವಿ, ಕೇಂದ್ರಸ್ಥಾನ ಸಹಾಯಕರು, ನೋಂದಣಿ ಮತ್ತು ಮುದ್ರಾಂಕ ಇಲಾಖೆ ಇವರಿಗೆ ದಿನಾಂಕ: 31.05.2010 ರಿಂದ ಅನ್ವಯವಾಗುವಂತೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 285(1) (ಬಿ) ರನ್ವಯ ಸ್ವಯಂ ನಿವೃತ್ತಿ ಹೊಂದಲು ಸರ್ಕಾರವು ಅನುಮತಿ ನೀಡಿ ಆದೇಶಿಸಿದೆ.

ಉಪ ನೋಂದಣಿ ಕಛೇರಿ, ಗೌರಿಬಿದನೂರು, ತುಮಕೂರು, ಕುಣಿಗಲ್ ಹಾಗೂ ಜಿಲ್ಲಾ ನೋಂದಣಿ ಕಚೇರಿ, ರಾಮನಗರ ಜಿಲ್ಲೆ ಈ ಕಛೇರಿಗಳಿಂದ ಸದರಿ ಅಧಿಕಾರಿಯ ಬೇಬಾಕಿ ಪ್ರಮಾಣ ಪತ್ರ ಪಡೆದು ಒದಗಿಸಿದ ನಂತರವೇ ಅವರ ನಿವೃತಿ ಸೌಲಭ್ಯಗಳನ್ನು ಮಂಜೂರು ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1453

ಟಿ.ಕೆ. ರಾಮಚಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ
(ನೋಂದಣಿ & ಮುದ್ರಾಂಕ)

ವಸತಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ : ವಇ 06 ಹೆಚ್‌ಎಹೆಚ್2010 ಬೆಂಗಳೂರು ದಿನಾಂಕ, 05–06–2010

ವಿಷಯ : ಆಶ್ರಯ ನಗರ ವಸತಿ ಯೋಜನೆಯನ್ನು ಮಾರ್ಪಡಿಸಿ ಜಾರಿಗೊಳಿಸುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ ವಇ 06 ಹೆಚ್‌ಎಹೆಚ್ 2010, ದಿನಾಂಕ 13–4–2010ರ ಆದೇಶದ ಭಾಗದಲ್ಲಿ ವಾಜಪೇಯಿ ನಗರ ವಸತಿ ಯೋಜನೆಯಡಿಯಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 1.25 ಲಕ್ಷ ರೂ.ಗಳ ಘಟಕ ವೆಚ್ಚದ ಕನಿಷ್ಠ 25 ಚ. ಮೀಟರ್ ವಿಸ್ತೀರ್ಣದ ಶೌಚಾಲಯ ಸಹಿತ ಮನೆಗಳ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರದಿಂದ 15,000 ರೂ.ಗಳು ಕರ್ನಾಟಕ ಗೃಹ ಮಂಡಳಿಯಿಂದ 35,000/– ರೂ.ಗಳು, ಬ್ಯಾಂಕ್ ಸಾಲದಿಂದ 50,000/– ರೂ.ಗಳು ಹಾಗೂ ಉಳಿದ 25.000/– ರೂ.ಗಳನ್ನು ಫಲಾನುಭವಿಯ ವಂತಿಕೆಯಿಂದ ನೀಡಲು ಪ್ರಸ್ತಾಪಿಸಲಾಗಿತ್ತು. ಸದರಿ ಆದೇಶವನ್ನು ಈ ಕೆಳಗಿನಂತೆ ತಿದ್ದಿಕೊಂಡು ಓದತಕ್ಕದು.

"ವಾಜಪೇಯಿ ನಗರ ವಸತಿ ಯೋಜನೆ ಅಡಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಠ 25 ಚದರ ಮೀಟರ್ ಅಂದರೆ 269 ಚದರ ಅಡಿಗಳ ಮನೆ ಬದಲಾಗಿ 285 ಚದರ ಅಡಿಗಳ ಮನೆ ನಿರ್ಮಿಸಲು ಹಾಗೂ ಅದಕ್ಕೆ ತಗಲುವ ಹೆಚ್ಚುವರಿ ವೆಚ್ಚವನ್ನು ಫಲಾನುಭವಿಯ ವಂತಿಕೆಯಿಂದ ಭರಿಸುವುದು ಎಂದು ತಿದ್ದಿಕೊಂಡು ಓದತಕ್ಕದ್ದು.**"**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 1454

ಕೆ.ಆರ್. ವಲ್ಲೂರ

ಪೀಠಾಧಿಕಾರಿಗಳು–2 ವಸತಿ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಸಿರಸಗಿ ನಾಗಪ್ಪ ಕೆ.ಎ.ಎಸ್. (ಹಿರಿಯ ಶ್ರೇಣಿ) ರವರ ಅಮಾನತ್ತನ್ನು ರದ್ದುಗೊಳಿಸಿ ಸೇವೆಗೆ ತೆಗೆದುಕೊಳ್ಳುವ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 49 ಕೆಇವಿ 2009, ಬೆಂಗಳೂರು, ದಿನಾಂಕ : 03–06–2010

ಶ್ರೀ ಸಿರಸಗಿ ನಾಗಪ್ಪ ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ, ಅಂದಿನ ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು, ಚಾಮರಾಜನಗರ ಇವರು ಬಲ್ಲ ಮೂಲಗಳಿಗಿಂತ ಅಧಿಕ ಪ್ರಮಾಣದ ಆಸ್ತಿಯನ್ನು ಹೊಂದಿರುವರೆಂಬ ಕುರಿತು ಕರ್ನಾಟಕ ಲೋಕಾಯುಕ್ತ ಪೊಲೀಸರು ಇವರ ವಿರುದ್ಧ ದಾಖಲಿಸಿರುವ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆದೇಶ ಸಂ : ಸಿಆಸುಇ 49 ಕೆಇವಿ 09, ದಿನಾಂಕ 23–01–2010 ರಲ್ಲಿ ಇವರನ್ನು ಸೇವೆಯಿಂದ ಅಮಾನತ್ತಿನಲ್ಲಿಟ್ಟಿರುವುದರಿಂದಲೂ,

ಶ್ರೀ ಸಿರಸಗಿ ನಾಗಪ್ಪ ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ ಅವರ ಅಮಾನತ್ತನ್ನು ರದ್ದುಪಡಿಸಿ ಸೇವೆಗೆ ತೆಗೆದುಕೊಳ್ಳಬೇಕೆಂದು ಸರ್ಕಾರವು ಭಾವಿಸಿರುವುದರಿಂದಲೂ,

ಸರ್ಕಾರವು ಶ್ರೀ ಸಿರಸಗಿ ನಾಗಪ್ಪ ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ ಅವರ ವಿರುದ್ಧ ಶಿಸ್ತು ಕ್ರಮ / ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತನ್ನು ತೆರವುಗೊಳಿಸಿ ಇವರನ್ನು ಸೇವೆಗೆ ತೆಗೆದುಕೊಳ್ಳಲಾಗಿದೆ.

ಶ್ರೀ ಸಿರಸಗಿ ನಾಗಪ್ಪ ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ ಇವರನ್ನು ಮುಖ್ಯ ಆಡಳಿತಾಧಿಕಾರಿಗಳು, ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಪಾಂಡವಪುರ, ಮಂಡ್ಯ ಜಿಲ್ಲೆ ಇಲ್ಲಿಗೆ ಮುಂದಿನ ಆದೇಶದವರೆಗೆ ಸ್ಥಳ ನಿಯುಕ್ತಿಗೊಳಿಸಲು ಇವರ ಸೇವೆಯನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ವಶಕ್ಕೆ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಚ್. ಆರ್. ನಾಗೇಂದ್ರ)

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. 1471

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ.

(ಸೇವೆಗಳು–2)

ಕಂದಾಯ ಸಚಿವಾಲಯ

ವಿಷಯ : ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ಹರಪ್ಪನಹಳ್ಳಿ ಪಟ್ಟಣದಲ್ಲಿ ಸ್ಥಳಾಂತರಗೊಳ್ಳುವ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : (1) ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಮಕಾ/2330/2010, ದಿನಾಂಕ 23–3–2010.

(2) ಸರ್ಕಾರದ ಆದೇಶ ಸಂಖ್ಯೆ : ಆಇ 23 ಟಿಎಆರ್ 2009, ದಿನಾಂಕ 05–12–2009.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ದಾವಣಗೆರೆ ಜಿಲ್ಲೆಯ ಹರಪ್ಪನಹಳ್ಳಿ ತಾಲ್ಲೂಕು ಹರಪ್ಪನಹಳ್ಳಿ ಪಟ್ಟಣದ ವ್ಯಾಪ್ತಿಯಲ್ಲಿ 2009ರ ಭಾರಿ ಮಳೆಯಿಂದ ಪ್ರವಾಹಕ್ಕೊಳಗಾಗಿ ಸ್ಥಳಾಂತರಗೊಳ್ಳುತ್ತಿರುವ ಹೊಸ ಬಡಾವಣೆಗಳಲ್ಲಿ ರಸ್ತೆ ಡಾಂಬರೀಕರಣವನ್ನು ಹೊರತುಪಡಿಸಿ ಉಳಿದ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ದಾವಣಗೆರೆ ಜಿಲ್ಲಾಧಿಕಾರಿಗಳಿಗೆ ರೂ. 1.00 ಕೋಟಿ ಬಿಡುಗಡೆ ಮಾಡುವಂತೆ ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು ಕೋರಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದ ಪ್ಯಾರಾ 3(ii) ರಲ್ಲಿ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ, ವಿಪತ್ತು ನಿರ್ವಹಣೆ ಇವರು ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ನಂತರ ಲೆಕ್ಕ ಶೀರ್ಷಿಕೆ 8235–00–111–0–02 Public Contributions to the Calamity Relief ಇಂದ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ಇವರ Miscellaneous Deposit Account-Public Contributions to the Calamity Relief Fund ಗೆ ವರ್ಗಾವಣೆ ಮಾಡುವಂತೆ ಆದೇಶಿಸಲಾಗಿದೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 197 ಟಿಎನ್‌ಆರ್ 2010, ಬೆಂಗಳೂರು, ದಿನಾಂಕ : 28–05–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಾವಣಗೆರೆ ಜಿಲ್ಲೆಯ ಹರಪ್ಪನಹಳ್ಳಿ ತಾಲ್ಲೂಕು ಹರಪ್ಪನ ಹಳ್ಳಿ ಪಟ್ಟಣದ ವ್ಯಾಪ್ತಿಯಲ್ಲಿ 2009ರ ಭಾರಿ ಮಳೆಯಿಂದ ಪ್ರವಾಹಕ್ಕೊಳಗಾಗಿ ಸ್ಥಳಾಂತರಗೊಳ್ಳುತ್ತಿರುವ ಹೊಸ ಬಡಾವಣೆಗಳಲ್ಲಿ ರಸ್ತೆ ಡಾಂಬರೀಕರಣವನ್ನು ಹೊರತುಪಡಿಸಿ ಉಳಿದ ಮೂಲಭೂತ ಸೌಕರ್ಯವನ್ನು ಕಲ್ಪಿಸಲು ದಾವಣಗೆರೆ ಜಿಲ್ಲಾಧಿಕಾರಿಗಳಿಗೆ ರೂ. 1.00 ಕೋಟಿ (ರೂಪಾಯಿ ಒಂದು ಕೋಟಿ ಮಾತ್ರ) ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 8235–00–111–0–02 Public Contributions to the Calamity Relief ಅಡಿಯಲ್ಲಿ ಡ್ರಾ ಮಾಡುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 8235–00–111–0–02 Public Contributions to the Calamity Relief ನಿಂದ ಜಿಲ್ಲಾ ಖಜಾನೆಯಲ್ಲಿರುವ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ಇವರ Miscellaneous Deposit Account-Public Contributions to the Calamity Relief Fund ಖಾತೆಗೆ ಟಿ.ಟಿ.ಆರ್. ಮೂಲಕ ವರ್ಗಾವಣೆ ಮಾಡಲು ಆದೇಶಿಸಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ ಇವರು ಪೇಯೀಸ್ ರಸೀದಿ ಬಿಲ್ಲು (ಸಿಟಿಎಸ್–8) ತಯಾರಿಸಿ ಮೇಲು ರುಜು ಮಾಡಿ, ಚಲನ್ ಲಗತ್ತಿಸಿ ಜಿಲ್ಲಾ ಖಜಾನೆಗೆ ಸಲ್ಲಿಸುವುದು. ದಾವಣಗೆರೆ ಜಿಲ್ಲೆಯ ಜಿಲ್ಲಾ ಖಜಾನಾಧಿಕಾರಿಗಳು ಈ ಮೊತ್ತವನ್ನು ಮೇಲೆ ತಿಳಿಸಿದಂತೆ ಲೆಕ್ಕ ಶೀರ್ಷಿಕೆ 8235–00–111–0–02 Public Contributions to the Calamity Relief ನಿಂದ ಟಿ.ಟಿ.ಆರ್. ಮೂಲಕ ಜಿಲ್ಲಾ ಖಜಾನೆಯಲ್ಲಿರುವ ಜಿಲ್ಲಾಧಿಕಾರಿಗಳ Miscellaneous Deposit Account-Public Contributions to the Calamity Relief Fund ಖಾತೆಗೆ ವರ್ಗಾವಣೆ ಮಾಡತಕ್ಕದ್ದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಈ ಆದೇಶವನ್ನು ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಟಿ. ಗಂಗಾಧರ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ

(ವಿಪತ್ತು ನಿರ್ವಹಣೆ ಮತ್ತು ಸೇವೆಗಳು–2)

ಪಿ.ಆರ್. 1472

ಕಂದಾಯ ಸಚಿವಾಲಯ

ವಿಷಯ : ಆಸರೆ ಯೋಜನೆಯಡಿಯಲ್ಲಿ ಮನೆಗಳ ನಿರ್ಮಾಣಕ್ಕಾಗಿ ರಾಯಚೂರು ಜಿಲ್ಲೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : (1) ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಮಕಾ/2690, ದಿನಾಂಕ 17-5-2010.

(2) ಸರ್ಕಾರದ ಆದೇಶ ಸಂಖ್ಯೆ : ಆಇ 23 ಟಿಎಆರ್ 2009, ದಿನಾಂಕ 05-12-2009.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿಯಂತೆ ಮೆ॥ ಹಟ್ಟಿ ಚಿನ್ನದ ಗಣಿ ನಿಗಮ, ರಾಯಚೂರು ಇವರು ರಾಯಚೂರು ಜಿಲ್ಲೆಯಲ್ಲಿ 1014 ಮನೆಗಳನ್ನು ಕಟ್ಟಲು ಮುಂದೆ ಬಂದಿದ್ದು, ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ವಿಪತ್ತು ನಿಧಿಗೆ ರೂ.10-00 ಕೋಟಿ ದೇಣಿಗೆ ನೀಡಿರುತ್ತಾರೆ. ಈ ಮೊತ್ತವನ್ನು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರ ಖಾತೆಗೆ ವರ್ಗಾವಣೆ ಮಾಡುವಂತೆ ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು ಕೋರಿರುತ್ತಾರೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದ ಪ್ಯಾರಾ 3(ii) ರಲ್ಲಿ ಅನುಷ್ಠಾನಾಧಿಕಾರಿಗಳಿಗೆ ಬಿಡುಗಡೆ ಮಾಡಲು ಸರ್ಕಾರದ ಕಾರ್ಯದರ್ಶಿ, ಕಂದಾಯ ಇಲಾಖೆ, ವಿಪತ್ತು ನಿರ್ವಹಣೆ ಇವರು ಮಾನ್ಯ ಮುಖ್ಯಮಂತ್ರಿಗಳ ಅನುಮೋದನೆ ನಂತರ ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ಇಂದ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ಇವರ Miscellaneous Deposit Account-Public Contributions to the Calamity Relief Fund ಗೆ ವರ್ಗಾವಣೆ ಮಾಡುವಂತೆ ಆದೇಶಿಸಲಾಗಿದೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 211 ಟಿಎನ್ಆರ್ 2010, ಬೆಂಗಳೂರು, ದಿನಾಂಕ : 29-05-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯಲ್ಲಿ 1014 ಮನೆಗಳನ್ನು ಕಟ್ಟಿಸಲು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರಿಗೆ ರೂ.10.00 ಕೋಟಿ (ರೂಪಾಯಿ ಹತ್ತು ಕೋಟಿ ಮಾತ್ರ) ಅನುದಾನವನ್ನು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ನಿಂದ ಜಿಲ್ಲಾ ಖಜಾನೆಯಲ್ಲಿರುವ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ಇವರ Miscellaneous Deposit Account-Public Contributions to the Calamity Relief Fund ಖಾತೆಗೆ ಟಿ.ಟಿ.ಆರ್. ಮೂಲಕ ವರ್ಗಾವಣೆ ಮಾಡಲು ಆದೇಶಿಸಿದೆ.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ಇವರು ಪೇಯೀಸ್ ರಸೀದಿ ಬಿಲ್ಲು (ಸಿಟಿಎಸ್-8) ತಯಾರಿಸಿ ಮೇಲು ರುಜು ಮಾಡಿ, ಚಲನ್ ಲಗತ್ತಿಸಿ ಜಿಲ್ಲಾ ಖಜಾನೆಗೆ ಸಲ್ಲಿಸುವುದು. ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಈ ಮೊತ್ತವನ್ನು ಮೇಲೆ ತಿಳಿಸಿದಂತೆ ಲೆಕ್ಕ ಶೀರ್ಷಿಕೆ 8235-00-111-0-02 Public Contributions to the Calamity Relief ನಿಂದ ಟಿ.ಟಿ.ಆರ್. ಮೂಲಕ ಜಿಲ್ಲಾ ಖಜಾನೆಯಲ್ಲಿರುವ ಜಿಲ್ಲಾ ಖಜಾನಾಧಿಕಾರಿಗಳ Miscellaneous Deposit Account-Public Contributions to the Calamity Relief Fund ಖಾತೆಗೆ ವರ್ಗಾವಣೆ ಮಾಡತಕ್ಕದ್ದು.

ಈ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಮೊತ್ತವನ್ನು ಮೆ॥ ಹಟ್ಟಿ ಚಿನ್ನದ ಗಣಿ ನಿಗಮ, ರಾಯಚೂರು ಇವರು 1014 ಮನೆಗಳನ್ನು ಕಟ್ಟಲು ಜಿಲ್ಲಾಧಿಕಾರಿಗಳು ಅವಶ್ಯಕತೆಗನುಗುಣವಾಗಿ ಉಪಯೋಗಿಸುವುದು.

ಈ ಆದೇಶವನ್ನು ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಟಿ. ಗಂಗಾಧರ)

ಸರ್ಕಾರದ ಅಧೀನ ಕಾರ್ಯದರ್ಶಿ,

ಕಂದಾಯ ಇಲಾಖೆ

(ವಿಪತ್ತು ನಿರ್ವಹಣೆ ಮತ್ತು ಸೇವೆಗಳು-2)

ಪಿ.ಆರ್. 1473

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ವಿಷಯ : ಶ್ರೀ ಬಿ.ಎಫ್. ಶಿರೂರ್, ನೋಟರಿ ಲಕ್ಷ್ಮೇಶ್ವರ ಇವರ ವಿರುದ್ಧ ದೂರು ಶಿಸ್ತು ಕ್ರಮ ಕುರಿತು.

ಓದಲಾಗಿದೆ :
(1) ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ್ ಇವರ ಪತ್ರ ಸಂಖ್ಯೆ ಎಡಿಎಂ 696/08, ದಿನಾಂಕ 14–03–08.
(2) ಸರ್ಕಾರದ ಪತ್ರ ಸಂಖ್ಯೆ ಲಾ 64 ಎಲ್‌ಸಿಎಲ್ 08, ದಿನಾಂಕ : 28–05–2008, 20–12–08.
(3) ಶ್ರೀ ಬಿ.ಎಫ್. ಶಿರೂರ್, ನೋಟರಿ ಲಕ್ಷ್ಮೇಶ್ವರ ಇವರ ಲಿಖಿತ ಹೇಳಿಕೆ ದಿನಾಂಕ 16.06.2008.
(4) ಸರ್ಕಾರದ ಪತ್ರ ಸಂಖ್ಯೆ ಲಾ 64 ಎಲ್‌ಸಿಎಲ್ 08, ದಿನಾಂಕ 19–07–2008.
(5) ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ್ ಇವರ ಪತ್ರ ಸಂಖ್ಯೆ 2959/08, ದಿನಾಂಕ 03–11–08.
(6) ಶ್ರೀ ಬಿ.ಎಫ್. ಶಿರೂರ್, ನೋಟರಿ ಲಕ್ಷ್ಮೇಶ್ವರ ಇವರ ರಕ್ಷಣಾ ಹೇಳಿಕೆ ದಿನಾಂಕ 31.12.2008.
(7) ಸರ್ಕಾರದ ಪತ್ರ ಸಂಖ್ಯೆ ಲಾ 64 ಎಲ್‌ಸಿಎಲ್ 08, ದಿನಾಂಕ 10–06–2009.
(8) ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ್ ಇವರ ಪತ್ರ ಸಂಖ್ಯೆ 2372/09, ದಿನಾಂಕ 07–07–09.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ 14–03–2008 ರ ಪತ್ರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ್ ರವರು ಶ್ರೀ ಬಿ.ಎಫ್. ಶಿರೂರ್, ನೋಟರಿ ಲಕ್ಷ್ಮೇಶ್ವರ ಇವರು ವಕೀಲರ ಸಂಘದ ಆವರಣದಲ್ಲಿ ಕರ್ತವ್ಯ ನಿರ್ವಹಿಸುತ್ತಿಲ್ಲ. ಇದರಿಂದ ತೊಂದರೆಯಾಗುತ್ತಿದ್ದು ಸಾರ್ವಜನಿಕರಿಂದ ಮೌಖಿಕ ದೂರು ಬಂದಿರುವುದಾಗಿ ಲಕ್ಷ್ಮೇಶ್ವರ ವಕೀಲರ ಸಂಘದಿಂದ ಸ್ವೀಕೃತವಾಗಿರುವ ದಿನಾಂಕ 01–03–08ರ ದೂರು ಮನವಿಯನ್ನು ಸರ್ಕಾರಕ್ಕೆ ಕಳುಹಿಸಿದ್ದರು.

ಆ ಬಗ್ಗೆ ನೋಟರಿಗಳ ಅಧಿನಿಯಮ/ನಿಯಮಗಳನ್ವಯ ಮೇಲೆ (2)ರಲ್ಲಿ ಓದಲಾದ ದಿನಾಂಕ 28–05–2008ರ ಪತ್ರದಲ್ಲಿ ಸಂಘದಿಂದ ಸ್ವೀಕೃತವಾದ ದೂರು ಹಾಗೂ ಶ್ರೀಯುತರ ನೋಟರಿ ಕರ್ತವ್ಯ ಲೋಪದೋಷದ ಬಗ್ಗೆ ಲಿಖಿತ ವಿವರಣೆ ಕೋರಲಾಗಿತ್ತು. ಅದರಂತೆ ಮೇಲೆ (3) ರಲ್ಲಿ ಓದಲಾದ ದಿನಾಂಕ 16–06–2008 ರಲ್ಲಿ ಶ್ರೀಯುತರು ಸಲ್ಲಿಸಿರುವ ಲಿಖಿತ ವಿವರಣೆಯ ಮೂಲ ಪ್ರತಿಯನ್ನು ಮೇಲೆ (4)ರಲ್ಲಿ ಓದಲಾದ ದಿನಾಂಕ 19–07–08 ರ ಪತ್ರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ್, ಇವರಿಗೆ ಕಳುಹಿಸಿ ನಿಯಮಾನುಸಾರ ಪರಿಶೀಲಿಸಿ ವಿಚಾರಣಾ ವರದಿ ಕಳುಹಿಸುವಂತೆ ಕೋರಲಾಗಿತ್ತು.

ಮೇಲೆ (5) ರಲ್ಲಿ ಓದಲಾದ ದಿನಾಂಕ 03–11–08ರ ಪತ್ರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ್ ಇವರು ವಾಣಿ ನ್ಯಾಯಾಧೀಶರು (ಕಿ.ವಿ.) ಮತ್ತು ಜೆ.ಎಂ.ಎಫ್.ಸಿ. ಲಕ್ಷ್ಮೇಶ್ವರ ಇವರಿಂದ ನಡೆಸಿದ ವಿಚಾರಣಾ ವರದಿಯನ್ನು ಕಳುಹಿಸಿ ನೋಟರಿ ಹಾಗೂ ಸಂಘದ ಸದಸ್ಯರು ಅವರದೇ ಆದ ಒಳಾಂತರ ಸ್ಥಿತಿಗಳಿಂದ ಅವರಲ್ಲಿ ಸಹಕಾರವಿರುವುದಿಲ್ಲ. ಇದರಿಂದ ಸಾರ್ವಜನಿಕರು ಅಂತಿಮವಾಗಿ ಸಂತ್ರಸ್ತರೆಂದು ತಿಳಿಸಿದ್ದು ಅದನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ 20–12–08 ರ ಪತ್ರದಲ್ಲಿ ಶ್ರೀಯುತರಿಗೆ ಕಳುಹಿಸಿ ಅವರ ರಕ್ಷಣಾ ಹೇಳಿಕೆಯನ್ನು ಕೋರಲಾಗಿತ್ತು. ಅದರಂತೆ ಶ್ರೀಯುತರು ಮೇಲೆ (6) ರಲ್ಲಿ ಓದಲಾದ ದಿನಾಂಕ 31–12–08ರ ಪತ್ರದಲ್ಲಿ ನೀಡಿರುವ ರಕ್ಷಣಾ ಹೇಳಿಕೆಯನ್ನು ಮೇಲೆ (7) ರಲ್ಲಿ ಓದಲಾದ ದಿನಾಂಕ 10.06.09ರ ಪತ್ರದಲ್ಲಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ್ ಇವರಿಗೆ ಕಳುಹಿಸಿ ನೋಟರಿ ನಿಯಮ 13(9) ರನ್ವಯ ಅವರ ಅಹವಾಲನ್ನು ಆಲಿಸಿ ವಿಚಾರಣಾ ವರದಿ ಕಳುಹಿಸುವಂತೆ ಪುನಃ ಕೋರಲಾಗಿತ್ತು. ಅದರಂತೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಗದಗ್ ಇವರು ಮೇಲೆ (8) ರಲ್ಲಿ ಓದಲಾದ ದಿನಾಂಕ 07–07–09 ರ ಪತ್ರದಲ್ಲಿ ಎರಡೂ ಕಡೆಯವರ ಅಹವಾಲನ್ನು ಆಲಿಸಿ ವಿಚಾರಣಾ ವರದಿಯನ್ನು ಸಲ್ಲಿಸಿದ್ದು ಅದರಲ್ಲಿ ಸಂಪೂರ್ಣ ವಾಸ್ತವಾಂಶವನ್ನು ವಿವರಿಸಿ ನೋಟರಿಯವರು ಉದ್ದೇಶಪೂರ್ವಕವಾಗಿ ಯಾವುದೇ ತಪ್ಪು ಮಾಡಿಲ್ಲವೆಂದು ಸಾರ್ವಜನಿಕರಿಂದಲೂ ಯಾವುದೇ ಲಿಖಿತ ದೂರುಗಳಿಲ್ಲದಿರುವುದನ್ನು ಸ್ಪಷ್ಟಪಡಿಸಿ, ವಕೀಲರ ಸಂಘ ಸಲ್ಲಿಸಿರುವ ದೂರಿನಲ್ಲಿ ಸಹಿ ಮಾಡಿರುವವರೆಲ್ಲರೂ ಸಂಘದ ವಕೀಲ ಸದಸ್ಯರೇ ಆಗಿರುವುದಾಗಿ ತಿಳಿಸಿ, ನೋಟರಿಯವರ ಕರ್ತವ್ಯ ನಿರ್ವಹಣೆಯಲ್ಲಿ ಅಲ್ಪಲೋಪದೋಷಗಳಿದ್ದಾಗ್ಯೂ ಸಂಘದ ಸದಸ್ಯರುಗಳಲ್ಲಿ ಪೈಪೋಟಿ ಇರುವುದಾಗಿ ಅವರಲ್ಲಿ ನೋಟರಿಯವರು ಸಹಕರಿಸದಿರುವುದನ್ನೇ ಅಸ್ತ್ರವನ್ನಾಗಿ ಉಪಯೋಗಿಸಿ ದೂರು ಸಲ್ಲಿಸಿರುವುದಾಗಿ ತಿಳಿಸಿ ನೋಟರಿ ಹಾಗೂ ಸಂಘದ ಸದಸ್ಯರ ವೈಯಕ್ತಿಕ ಬಳಾಂತರ ಸ್ಥಿತಿಯ ಅಸಹಕಾರದಿಂದ

ಅಂತಿಮವಾಗಿ the person who is the sufferer, is particularly, financially is the litigant Public. In my view, both parties are at fault ಎಂದು ತಿಳಿಸಿರುತ್ತಾರೆ.

ಸದರಿ ವಿಷಯವನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಲಾ 64 ಎಲ್‌ಸಿಎಲ್ 2008, ಬೆಂಗಳೂರು, ದಿನಾಂಕ : 19-12-2009

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಬಿ.ಎಫ್. ಶಿರೂರ್, ನೋಟರಿ ಲಕ್ಷ್ಮೇಶ್ವರ ಇವರಿಗೆ ನೋಟರಿ ನಿಯಮಗಳು 1956 ರ ನಿಯಮ 13(12) ಆ (ii) ರನ್ವಯ 3 ತಿಂಗಳು ನೋಟರಿ ವೃತ್ತಿ ಮಾಡದಂತೆ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಹೆಚ್. ಆರ್. ಶಕುಂತಲ)

ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-2)

ಕಾನೂನು ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ

ಪಿ.ಆರ್. 1474

ಕಂದಾಯ ಸಚಿವಾಲಯ

ವಿಷಯ : ಬೀದರ್ ಜಿಲ್ಲೆ ಬಸವ ಕಲ್ಯಾಣ ತಾಲ್ಲೂಕಿನ ಬಸವ ಕಲ್ಯಾಣ ನಗರದ ಶ್ರೀ ಸದ್ಗುರು ಸದಾನಂದಸ್ವಾಮಿ ದೇವಾಲಯವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತುಪಡಿಸುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಪತ್ರ ಸಂಖ್ಯೆ : ಏಕರೂಪ ಶಾಸಕ ಸಿಆರ್ 12/2008-09, ದಿನಾಂಕ 21-12-2009.

ಪ್ರಸ್ತಾವನೆ :

ಮೇಲೆ ಓದಲಾದ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಪತ್ರ ದಿನಾಂಕ 21-12-2009 ರಲ್ಲಿ ಬೀದರ್ ಜಿಲ್ಲೆ, ಬಸವ ಕಲ್ಯಾಣ ತಾಲ್ಲೂಕಿನ ಬಸವ ಕಲ್ಯಾಣ ನಗರದ ಶ್ರೀ ಸದ್ಗುರು ಸದಾನಂದಸ್ವಾಮಿ ಮಠವನ್ನು ದೇವಸ್ಥಾನವೆಂದು ತಪ್ಪಾಗಿ ಅಧಿಸೂಚಿತ ಸಂಸ್ಥೆಗಳ ಪಟ್ಟಿಗೆ ಸೇರಿಸಿರುವುದರಿಂದ ಸಂಸ್ಥೆಯನ್ನು ಅಧಿಸೂಚಿತ ಪಟ್ಟಿಯಿಂದ ಹೊರತುಪಡಿಸುವಂತೆ ಮಠದ ಪೀಠಾಧಿಕಾರಿಗಳು ಮನವಿಯಲ್ಲಿ ಕೋರಿರುತ್ತಾರೆ. ಈ ಕುರಿತು ಪರಿಶೀಲಿಸಿ, ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಗಳು, ಬೀದರ್‌ರವರಿಗೆ ಕೋರಿಕೆ ಸಲ್ಲಿಸಲಾಗಿತ್ತು.

ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆರವರು ಈ ಕುರಿತು ಶ್ರೀ ಸದ್ಗುರು ಸದಾನಂದಸ್ವಾಮಿ ದೇವಸ್ಥಾನವನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಕೈಬಿಡುವ ಕುರಿತು ದಾಖಲೆಗಳಿಂದ ಪರಿಶೀಲಿಸಲಾಗಿ, ಇದು ಒಂದು ಮಠವೆಂದು ಕಂಡುಬರುತ್ತದೆಂದು ವರದಿ ಮಾಡಿರುತ್ತಾರೆ ಎಂಬ ವಿಚಾರವನ್ನು ಸರ್ಕಾರದ ಅವಗಾಹನೆಗಾಗಿ ಸಲ್ಲಿಸುತ್ತಾ, ಶ್ರೀ ಸದ್ಗುರು ಸದಾನಂದಸ್ವಾಮಿ ದೇವಸ್ಥಾನವನ್ನು (ಮಠ) ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತುಪಡಿಸುವ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಲು ಸರ್ಕಾರಕ್ಕೆ ಕೋರಿಕೆ ಸಲ್ಲಿಸಿರುತ್ತಾರೆ.

ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆರವರ ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 9 ಮುಆಬಿ 2010, ಬೆಂಗಳೂರು, ದಿನಾಂಕ : 28-5-2010

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೀದರ್ ಜಿಲ್ಲೆ, ಬಸವ ಕಲ್ಯಾಣ ತಾಲ್ಲೂಕಿನ ಬಸವ ಕಲ್ಯಾಣ ನಗರದ ಶ್ರೀ ಸದ್ಗುರು ಸದಾನಂದಸ್ವಾಮಿ ಮಠವನ್ನು ದೇವಸ್ಥಾನವೆಂದು ತಪ್ಪಾಗಿ ಅಧಿಸೂಚಿತ ಸಂಸ್ಥೆಗಳ ಪಟ್ಟಿಗೆ ಸೇರಿಸಿರುವುದರಿಂದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಕಾಯ್ದೆ ಸೆಕ್ಷನ್ 1 (4) (i) ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ ಕಂಇ 77 ಮುಸೇವಿ 2003 ದಿನಾಂಕ : 30-04-2003 ರಲ್ಲಿನ ಬೀದರ್ ಜಿಲ್ಲೆ, ಬಸವ ಕಲ್ಯಾಣ ತಾಲ್ಲೂಕಿನ ಅಧಿಸೂಚಿತ ಸಂಸ್ಥೆಗಳ ಪಟ್ಟಿಯ ಪುಟಸಂಖ್ಯೆ 210ರ ಕ್ರಮ ಸಂಖ್ಯೆ 4 ರಲ್ಲಿ **"ಸದ್ಗುರು ಸದಾನಂದ ದೇವಸ್ಥಾನ, ಬಸವ ಕಲ್ಯಾಣ"** ಇದನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಲ್ಲಿ ಪ್ರಕಟಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ಸಂಸ್ಥೆಯನ್ನು ಅಧಿಸೂಚಿತ ಸಂಸ್ಥೆಗಳ ಪಟ್ಟಿಯಿಂದ ಹೊರತುಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಲ್.ಎಸ್. ಶ್ರೀಕಂಠಬಾಬು)

ಪೀಠಾಧಿಕಾರಿ,

ಕಂದಾಯ ಇಲಾಖೆ (ಮುಜರಾಯಿ)

ಪಿ.ಆರ್. 1475

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಪಸಂಮೀ 60 ಪಸಸೇ 2010, ಬೆಂಗಳೂರು, ದಿನಾಂಕ 15–02–2010

ಸೇರ್ಪಡೆ ಆದೇಶ ಸಂಖ್ಯೆ : ಪಸಂಮೀ 271 ಪಅಸೇ 2009, ದಿನಾಂಕ 30–12–2009 ರನ್ವಯ ಇಲಾಖಾ ನಿರ್ದೇಶಕರಿಗೆ ಪ್ರತ್ಯಾಯೋಜಿಸಿರುವ ಆಡಳಿತಾತ್ಮಕ ಅಧಿಕಾರಗಳ ಪೈಕಿ ಸಮಯಾವಧಿ ವೇತನಶ್ರೇಣಿ, ಸ್ವಯಂಚಾಲಿತ ವೇತನಶ್ರೇಣಿ ಮಂಜೂರಾತಿಗೆ ಸಂಬಂಧಿಸಿದಂತೆ ಅಪರ / ಜಂಟಿ ನಿರ್ದೇಶಕರುಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಅಧಿಕಾರಿ / ಸಿಬ್ಬಂದಿಗಳ ಸಮಯಾವಧಿ ವೇತನಶ್ರೇಣಿ, ಸ್ವಯಂಚಾಲಿತ ವೇತನಶ್ರೇಣಿಗೆ ಮಂಜೂರಾತಿ ನೀಡುವ ಕೆಲಸವನ್ನೂ ಸಹ ನಿರ್ವಹಿಸುವುದು ಎಂದಿರುವುದನ್ನು **"**ಸರ್ಕಾರ ನೇಮಕಾತಿ ಪ್ರಾಧಿಕಾರವಾಗಿರುವ ಗ್ರೂಪ್ **"**ಎ**"** ಹಾಗೂ ಗ್ರೂಪ್ **"**ಬಿ**"** ಅಧಿಕಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸಿಬ್ಬಂದಿಗಳ ಸಮಯಾವಧಿ ವೇತನಶ್ರೇಣಿ, ಸ್ವಯಂಚಾಲಿತ ಹಿರಿಯ ವೇತನಶ್ರೇಣಿ, ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ನೀಡುವ ಕೆಲಸವನ್ನೂ ಸಹ ನಿರ್ವಹಿಸುವುದು**"** ಎಂದು ಮಾರ್ಪಾಡು ಮಾಡಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಂ.ಪಿ. ನಾಗರಾಜ)

ಪೀಠಾಧಿಕಾರಿ–2,

ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ,

(ಪಶುಸಂಗೋಪನೆ–ಎ)

ಪಿ.ಆರ್. 1476

COMMERCE & INDUSTRIES SECRETARIAT

Sub :- Approval to the Project Proposal of M/s. Luxor Energy Pvt. Ltd., to establish a "2x660 MW Thermal Power Plant" at Mulvad Village, Basavana Bagewadi Taluk, Bijapur District.

Read :- Proceedings of the 22nd State High Level Clearance Committee (SHLCC) meeting held on 24-05-2010.

***

Preamble:

M/s. Luxor Energy Pvt. Ltd., proposes to establish a "2x660 MW Thermal Power Plant" at Mulvad Village, Basavana Bagewadi Taluk, Bijapur District, with an investment of Rs. 5902.80 crores, generating employment to about 1600 persons.

In the 22nd State High Level Clearance Committee (SHLCC) Meeting held on 24-05-2010 the proposal of the Company has been approved.

Government has examined the recommendations made by the State High Level Clearance Committee in the 22nd Meeting held on 24-05-2010 in all aspects.

Hence the following Order.

Government Order No. CI 185 SPI 2010, Bangalore, dated : 02-06-2010

Government is pleased to accord in principle approval to the Project Proposal of M/s. Luxor Energy Pvt. Ltd., to establish a "2x660 MW Thermal Power Plant" at Mulvad Village, Basavana Bagewadi Taluk, Bijapur District, with an investment of Rs. 5902.80 crores, generating employment to about 1600 persons and extend the following infrastructure facilities, incentives and concessions.

Infrastructure Facilities :

1. **Land :** 900 acres – KIADB to acquire and allot as SUC in Mulvad Village, Basavana Bagewadi Taluk, Bijapur District.
2. **Water :** 32.50 MGD of water from Krishna River / Almatti Dam, subject to the approval of Water Resources Department.
3. **Incentives and Concessions :** As per applicable Energy Policy of the State.

GENERAL TERMS AND CONDITIONS :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Power Purchase :** The project proponent should make arrangements with KPTCL to supply at least 30% of generated power to the State Grid through PPA with respective ESCOM and approach KERC for price fixation.
3. **Environment :** The promoters to obtain CFE and CFO from KSPCB and environmental clearance from MOEF, GOI.

4. **Employment :** The Company shall prepare a plan for development of Human Resources required for the project, train local people and provide employment to these trained local youth and comply with the provisions of Industrial Policy of Govt. of Karnataka. A copy of Human Resources Development plan shall be sent to the Commissioner for I.D. & Director of Industries and Commerce for monitoring.
5. **Vendor Development :** Wherever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
6. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
7. **Others :**
   a) The project proponents shall provide employment to at least one member of the family of each land looser as the land is being acquired through KIADB.
   b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

(**Aparna Pavate**)
Desk Officer (Technical Cell)
Commerce & Industries Department

P.R. 1477

COMMERCE & INDUSTRIES SECRETARIAT

Sub : Approval to the proposal of Board of Control for Cricket in India to establish a "Cricket Academy" – Change of Location from Bidadi Industrial Area to Kodugurki and Yemarahalli villages, Devanahalli Taluk.

Read: 1) Govt. Order No: CI 44 SPI 2008 dated : 15.04.2008
2)Proceedings of the 22nd State High Level Clearance Committee (SHLCC)meeting held on 24.05.2010.

-:O:-

PREAMBLE:-

The Proposal of Board of Control for Cricket in India to establish a "Cricket Academy" Comprising Cricket Ground, Indoor facility, Club, Gymnasium and Conference Hall, with an investment of Rs. 303.93 crores, at Ramanagara District was approved in the 10th SHLCC meeting held on 28.08.2007. As per the recommendations of the Committee, KIADB allotted 32 acres of land in Bidadi Industrial Area, Ramanagara Taluk & District out of 183 acres 5 guntas of land surrendered by M/s. Himalaya Drug Company. Accordingly Govt. Order read at (1) above has been issued.

BCCI has now requested alternate land near Bangalore International Airport for the proposed "Cricket Academy" as the Academy is frequently visited by the National and International Players and officials for training, fitness and rehabilitation.

BCCI has identified 49 acres 39 gunts of land located on Nandi Hill Road in Kodugurki and Yemarahalli Villages of Devanahalli Taluk, Bangalore Rural Disrict and requested KIADB to acquire and allot the same for the project as SUC.

In the 22nd State High Level Clearance Committee (SHLCC) Meeting held on 24.05.2010 the committee approved the request of the company for the change of location for setting up of the academy at the newly identified land near Devanahalli.

Hence the following Order:-

GOVERNMENT ORDER NO: CI 253 SPI 2010
BANGALORE, DATED: 08.06.2010

Government is pleased to accord in principle approval to the change of location from Bidadi Industrial Area to newly identified 49 acres 39 guntas of land located on Nandi Hill Road in Kodugurki and Yemarahalli Villages of Devanahalli Taluk, Bangalore Rural District for setting up of "Cricket Academy" by BCCI and KIADB to acquire and allot the above said land for the project as SUC.

P.R.NO.1481

By Order and in the name of the Governor of Karnataka
APARNA PAVATE
Desk Officer(Technical Cell)
Commerce & Industries Department.

ಆರ್ಥಿಕ ಸಚಿವಾಲಯ

ವಿಷಯ : ರಾಜ್ಯ ಸರ್ಕಾರಿ ನೌಕರರಿಗೆ ಗೃಹ ನಿರ್ಮಾಣ ಮುಂಗಡ: ಖರೀದಿ : ರಿಪೇರಿ : ಮುಂಗಡವಾಗಿ ಹೆಚ್.ಡಿ.ಎಫ್.ಸಿ. ಸಂಸ್ಥೆ, ಬೆಂಗಳೂರು ಇವರ ಮೂಲಕ 13 ವಿವಿಧ ಕಂತುಗಳಲ್ಲಿ ಬಿಡುಗಡೆ ಮಾಡಿರುವ ಸಾಲಗಳ ಮೇಲಿನ ಬಡ್ಡಿಯನ್ನು ವಿಧಿಸಿರುವ ಬಗ್ಗೆ ಸ್ಪಷ್ಟೀಕರಣ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಆಇ 95 ಎಹೆಚ್‌ಬಿ 89 ದಿ: 26.7.1989.
2. ಸರ್ಕಾರಿ ಆದೇಶ ಸಂಖ್ಯೆ: ಆಇ 217 ಮಕಮು 90 ದಿ: 10.4.1991.
3. ಸರ್ಕಾರಿ ಆದೇಶ ಸಂಖ್ಯೆ: ಆಇ 68 ಮಕಮು 91 ದಿ: 4.12.1991.
4. ಸರ್ಕಾರಿ ಆದೇಶ ಸಂಖ್ಯೆ: ಆಇ 27 ಮಕಮು 92 ದಿ: 21.10.1992.
5. ಸರ್ಕಾರಿ ಆದೇಶ ಸಂಖ್ಯೆ: ಆಇ 48 ಮಕಮು 94 ದಿ : 21.10.1994.
6. ಸರ್ಕಾರಿ ಆದೇಶ ಸಂಖ್ಯೆ: ಆಇ 43 ಮಕಮು 94 ದಿ : 2.8.1996.
7. ಸರ್ಕಾರಿ ಆದೇಶ ಸಂಖ್ಯೆ: ಆಇ 43 ಮಕಮು 94 ದಿ : 31.12.1996.
8. ಸರ್ಕಾರಿ ಆದೇಶ ಸಂಖ್ಯೆ: ಆಇ 96 ಮಕಮು 96 ದಿ : 24.5.97.
9. ಸರ್ಕಾರಿ ಆದೇಶ ಸಂಖ್ಯೆ: ಆಇ 6 ಮಕಮು 97 ದಿ : 17.10.1997.
10. ಸರ್ಕಾರಿ ಆದೇಶ ಸಂಖ್ಯೆ: ಆಇ 1 ಮಕಮು 98 ದಿ : 21.7.1998.
11. ಸರ್ಕಾರಿ ಆದೇಶ ಸಂಖ್ಯೆ: ಆಇ 41 ಮಕಮು 98 ದಿ : 14.10.1999.
12. ಸರ್ಕಾರಿ ಆದೇಶ ಸಂಖ್ಯೆ: ಆಇ 56 ಮಕಮು 99 ದಿ : 4.4.2000.
13. ಸರ್ಕಾರಿ ಆದೇಶ ಸಂಖ್ಯೆ: ಆಇ 8 ಮಕಮು 98 ದಿ : 8.11.2000.
14. ಸರ್ಕಾರಿ ಆದೇಶ ಸಂಖ್ಯೆ: ಆಇ 45 ಮಕಮು 2001 ದಿ: 3.7.2002.
15. ನಿರ್ದೇಶಕರು, ಖಜಾನೆ ಇಲಾಖೆ ಇವರ ಪತ್ರ ಸಂ: ಖನಿ/ ಹೆಚ್‌ಡಿಎಫ್‌ಡಿ–3/10–11, ದಿನಾಂಕ: 26.5.2010

ಪ್ರಸ್ತಾವನೆ:

ಕ್ರಮ ಸಂಖ್ಯೆ : 1–7 ಹಾಗೂ 9–15 ರಲ್ಲಿ ಮೇಲ್ಕಂಡಂತೆ ಓದಲಾದ ಆದೇಶಗಳಲ್ಲಿ ಹೆಚ್.ಡಿ.ಎಫ್.ಸಿ., ಬೆಂಗಳೂರು ಮುಖಾಂತರ ರಾಜ್ಯ ಸರ್ಕಾರಿ ನೌಕರರಿಗೆ ಗೃಹ ನಿರ್ಮಾಣ : ಖರೀದಿ : ರಿಪೇರಿ : ಮುಂಗಡವಾಗಿ ಬಿಡುಗಡೆ ಮಾಡಿರುವ 13 ವಿವಿಧ ಕಂತುಗಳ ಸಾಲಗಳ ಮೇಲಿನ ಬಡ್ಡಿಯನ್ನು ಅನುಬಂಧದಲ್ಲಿ ನಮೂದಿಸಿದಂತೆ ಆದೇಶಿಸಲಾಗಿರುತ್ತದೆ. ಸದರಿ ಬಡ್ಡಿ ದರಗಳು ಕನಿಷ್ಠ ಸಾಲಕ್ಕೆ ಕಡಿಮೆ ಬಡ್ಡಿ ದರ ಕನಿಷ್ಠತೆಗೆ ಮೀರಿದ ಸಾಲಕ್ಕೆ ಹೆಚ್ಚಿನ ಬಡ್ಡಿ ದರ ಅನ್ವಯವಾಗುತ್ತದೆ.

ಮೇಲೆ ಕ್ರಮ ಸಂಖ್ಯೆ: 8ರಲ್ಲಿ ಓದಲಾದ ದಿ: 24.5.97 ರ ಪತ್ರದಲ್ಲಿ ಕನಿಷ್ಠತೆ ಮೀರಿದ ಸಾಲದ ಪೂರ್ತಿ ಮೊತ್ತಕ್ಕೆ ಹೆಚ್ಚಿನ ಬಡ್ಡಿ ದರವನ್ನು ಅನ್ವಯವಾಗುವ ಬಗ್ಗೆ ಈಗಾಗಲೇ ಸ್ಪಷ್ಟೀಕರಣ ನೀಡಲಾಗಿದೆ. ಆದರೂ ಈ ಸಾಲವನ್ನು ಪಡೆದ ಕೆಲವು ನೌಕರರು ಸರ್ಕಾರಿ ಆದೇಶಗಳನ್ನು ತಪ್ಪಾಗಿ ಅರ್ಥೈಸಿಕೊಂಡು ಕನಿಷ್ಠತೆ ಸಾಲಕ್ಕೆ ಒಂದು ಬಡ್ಡಿ ದರ ಕನಿಷ್ಟತೆ ಮೀರಿದ ಸಾಲಕ್ಕೆ ಹೆಚ್ಚಿನ ಬಡ್ಡಿ ದರಗಳನ್ನು ಬೇರೆ ಬೇರೆಯಾಗಿ ವಿಭಜಿಸಿಕೊಂಡು ಬಡ್ಡಿಯನ್ನು ಲೆಕ್ಕಾಚಾರ ಮಾಡಬೇಕೆಂದು ಖಜಾನೆ

ನಿರ್ದೇಶಕರಿಗೆ ಅರ್ಜಿ ಸಲ್ಲಿಸುತ್ತಿರುವುದಲ್ಲದೆ ಗ್ರಾಹಕರ ವೇದಿಕೆಗಳನ್ನೊಳಗೊಂಡಂತೆ ವಿವಿಧ ನ್ಯಾಯಾಲಯಗಳಲ್ಲಿಯೂ ಕೂಡ ಅರ್ಜಿ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಮೇಲೆ ಕ್ರಮ ಸಂಖ್ಯೆ : (15) ರಲ್ಲಿ ಓದಲಾದ ದಿನಾಂಕ: 25.6.2010ರ ಪತ್ರದಲ್ಲಿ ಖಜಾನೆ ನಿರ್ದೇಶಕರು ಬಡ್ಡಿ ದರವನ್ನು ವಿಭಜಿಸಿಕೊಂಡು ಸಾಲವನ್ನು ಪಡೆದ ಮುಂಗಡದಾರರ ಸಂಖ್ಯೆ ಸುಮಾರು 15,500 ಇದ್ದು ಇವರೆಲ್ಲರಿಗೂ ವ್ಯತ್ಯಾಸದ ಬಡ್ಡಿ ಹಣವನ್ನು ಹಿಂಪಾವತಿಸಬೇಕಾಗುತ್ತದೆಂದು ತಿಳಿಸಿ, ಬಡ್ಡಿ ದರದ ಬಗ್ಗೆ ಸರ್ಕಾರದ ಆದೇಶವನ್ನು ಹೊರಡಿಸಬೇಕೆಂದು ಕೋರಿರುತ್ತಾರೆ.

ಮೇಲೆ ಓದಲಾದ ಸರ್ಕಾರದ ದಿನಾಂಕ : 24.5.1997 ರ ಪತ್ರದಲ್ಲಿ ಬಡ್ಡಿ ದರದ ಬಗ್ಗೆ ನೀಡಿರುವ ಸ್ಪಷ್ಟೀಕರಣ ಹೆಚ್.ಡಿ.ಎಫ್.ಸಿ. ಮುಖಾಂತರ ಸರ್ಕಾರದಿಂದ 13 ವಿವಿಧ ಕಂತುಗಳಲ್ಲಿ ಮಂಜೂರು ಮಾಡಲಾದ ಎಲ್ಲಾ ನೌಕರರಿಗೂ ಅನ್ವಯಿಸುತ್ತದೆಯೇ ಹೊರತು ಕೇವಲ ಒಂದೆರಡು ಆದೇಶಗಳಿಗೆ ಅನ್ವಯವಾಗುವುದಿಲ್ಲ.

ಮೇಲ್ಕಂಡ ಅಂಶಗಳನ್ನು ಸರ್ಕಾರ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಇ 12 ಮಕಮು 2010, ಬೆಂಗಳೂರು, ದಿನಾಂಕ: 3ನೇ ಜೂನ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭಗಳು ಹಾಗೂ ಸನ್ನಿವೇಶಗಳ ಹಿನ್ನೆಲೆಯಲ್ಲಿ ಹೆಚ್.ಡಿ.ಎಫ್.ಸಿ. ಬೆಂಗಳೂರು ಮುಖಾಂತರ ರಾಜ್ಯ ಸರ್ಕಾರಿ ನೌಕರರಿಗೆ ಗೃಹ ನಿರ್ಮಾಣ ಮುಂಗಡ : ಖರೀದಿ : ರಿಪೇರಿ : ಮುಂಗಡಕ್ಕಾಗಿ ಬಿಡುಗಡೆ ಮಾಡಿರುವ 13 ವಿವಿಧ ಕಂತುಗಳ ಸಾಲಗಳ ಮೇಲೆ ಅನುಬಂಧದಲ್ಲಿನ ವಿವಿಧ ಆದೇಶಗಳಲ್ಲಿ ನಮೂದಿಸಿದಂತೆ ಬಡ್ಡಿ ದರಗಳು ಕನಿಷ್ಠತೆ ಸಾಲಕ್ಕೆ ಕಡಿಮೆ ಬಡ್ಡಿ ದರ, ಕನಿಷ್ಠತೆಗೆ ಮೀರಿದ ಸಾಲಕ್ಕೆ ಹೆಚ್ಚಿನ ಬಡ್ಡಿ ದರ ಪೂರ್ಣ ಮೊತ್ತಕ್ಕೆ ಅನ್ವಯವಾಗುತ್ತದೆಯೇ ಹೊರತು ಇಂತಹ ಸಂದರ್ಭದಲ್ಲಿ ಕನಿಷ್ಠತೆ ಸಾಲಕ್ಕೆ ಒಂದು ಬಡ್ಡಿದರ ಕನಿಷ್ಠತೆ ಮೀರಿದ ಸಾಲಕ್ಕೆ ಹೆಚ್ಚಿನ ಬಡ್ಡಿದರಗಳನ್ನು ಬೇರೆ ಬೇರೆಯಾಗಿ ವಿಭಜಿಸಿ ವಿಧಿಸಲಾಗುವುದಿಲ್ಲವೆಂದೂ ಸ್ಪಷ್ಟೀಕರಿಸುತ್ತಾ ಇದು 13 ಕಂತುಗಳಲ್ಲಿ ಮಂಜೂರು ಮಾಡಲಾದ ಎಲ್ಲಾ ಸಾಲಗಳಿಗೆ ಅನ್ವಯವಾಗುತ್ತದೆಂದು ಇದನ್ನು ಸಂಬಂಧಪಟ್ಟವರೆಲ್ಲರೂ ಕಟ್ಟುನಿಟ್ಟಾಗಿ ಪಾಲಿಸತಕ್ಕದೆಂದು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎನ್. ಶ್ರೀನಿವಾಸಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ(ಆಡಳಿತ ಮತ್ತು ಮುಂಗಡ)

ಅನುಬಂಧ

ಹೆಚ್.ಡಿ.ಎಫ್.ಸಿ. ಸಂಸ್ಥೆ ಮುಖಾಂತರ 13 ಕಂತುಗಳಲ್ಲಿ ಮಂಜೂರು ಮಾಡಲಾಗಿರುವ ಸಾಲಗಳಿಗೆ ವಿವಿಧ ಆದೇಶಗಳಲ್ಲಿ ವಿಧಿಸಿರುವ ಬಡ್ಡಿ ದರ ಈ ಕೆಳಕಂಡಂತೆ ಇರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ & ದಿನಾಂಕ	ಸಾಲ ಮಂಜೂರಾತಿ ಮೊತ್ತ (ಖಟಿಜಷಾಜಣಾಚಿಟ)	ವಾರ್ಷಿಕ ಬಡ್ಡಿ ದರ
ಸರ್ಕಾರಿ ಆದೇಶ ಸಂಖ್ಯೆ: ಆಇ 95 ಎ ಹೆಚ್ ಬಿ 89 ದಿ: 26.7.1989	20,000 ರೂ ವರೆಗಿನ ಸಾಲಕ್ಕೆ 20,001ರೂ ಗಳಿಂದ 50,000ರೂ ವರೆಗಿನ ಸಾಲಕ್ಕೆ 50,000ರೂ ಮೇಲ್ಪಟ್ಟ ಸಾಲಕ್ಕೆ	12.5% 13.5% 14%
ಸರ್ಕಾರಿ ಆದೇಶ ಸಂಖ್ಯೆ:ಆಇ217 ಮಕಮು 90 ದಿ: 10.4.1991	50,000 ರೂ. ಮೇಲ್ಪಟ್ಟುರೂ. 1.00 ಲಕ್ಷಕ್ಕಿಂತ ಕಡಿಮೆ ಇರುವ ಸಾಲಕ್ಕೆ ರೂ.1.00 ಲಕ್ಷ ಮೇಲ್ಪಟ್ಟು ರೂ.1.50ಗಳಿಗಿಂತ ಕಡಿಮೆ ಇರುವ ಸಾಲಕ್ಕೆ	10.5% 13%
ಸರ್ಕಾರಿ ಆದೇಶ ಸಂಖ್ಯೆ:ಆಇ 68 ಮಕಮು 91 ದಿ: 4.12.1991	50,001 ರಿಂದ 1,00,000 ರೂ.ಗಳವರೆಗೆ 1,00,001 ರಿಂದ 2,50,000 ರೂ.ಗಳವರೆಗೆ	12% 15.5%
ಸರ್ಕಾರಿ ಆದೇಶ ಸಂಖ್ಯೆ : ಆಇ27 ಮಕಮು 92 ದಿ: 21.10.1992	1,00,001 ರಿಂದ 2,50,00 ರೂ.ಗಳವರೆಗೆ	15.5%
ಸರ್ಕಾರಿ ಆದೇಶ ಸಂಖ್ಯೆ : ಆಇ48 ಮಕಮು 94 ದಿ; 21.10.1994	ರೂ.50.000ರಿಂದ ರೂ. 1,00,000ಗಳವರೆಗೆ ರೂ. 1,00,001 ರಿಂದ 3,00,000ಗಳವರೆಗೆ	12% 15.5%

ಸರ್ಕಾರಿ ಆದೇಶ ಸಂಖ್ಯೆ : ಆಇ43 ಮಕಮು 94 ದಿ: 2.8.1996	ರೂ.1.00ಲಕ್ಷದವರೆಗಿನ ಸಾಲಕ್ಕೆ ರೂ.1.00ಲಕ್ಷ ಮೇಲ್ಪಟ್ಟು &ರೂ. 2.00 ಲಕ್ಷದವರೆಗಿನ ಸಾಲಕ್ಕೆ ರೂ. 2.00 ಲಕ್ಷಕ್ಕೆ ಮೇಲ್ಪಟ್ಟ ಸಾಲಕ್ಕೆ	12% 15.5% 16.5%
ಸರ್ಕಾರಿ ಆದೇಶ ಸಂಖ್ಯೆ: ಆಇ43 ಮಕಮು 94 ದಿ: 31.12.1996	ರೂ.1.00.ಲಕ್ಷದವರೆಗಿನ ಸಾಲಕ್ಕೆ ರೂ.1.00ಲಕ್ಷ ಮೇಲ್ಪಟ್ಟು & ರೂ2.00 ಲಕ್ಷದವರೆಗಿನ ಸಾಲಕ್ಕೆ ರೂ.2.00 ಲಕ್ಷಕ್ಕೆ ಮೇಲ್ಪಟ್ಟ ಸಾಲಕ್ಕೆ	12% 15.5% 16.5%
ಸರ್ಕಾರದ ಪತ್ರ ಸಂಖ್ಯೆ : ಆಇ 96 ಮಕಮು 96 ದಿ: 24.5.97	80,000 ರೂ.ವರೆಗಿನ ಸಾಲಕ್ಕೆ 80,000 ರೂ.ಗಳಿಂದ ರೂ. 1.50 ಲಕ್ಷವರೆಗಿನ ಸಾಲಕ್ಕೆ	10% 12%
ಸರ್ಕಾರಿ ಆದೇಶ ಸಂಖ್ಯೆ:ಆಇ 6 ಮಕಮು 97 ದಿ : 17.10.1997	ರೂ.1.00.ಲಕ್ಷದವರೆಗಿನ ಸಾಲಕ್ಕೆ ರೂ.1.00 ಲಕ್ಷ ಮೇಲ್ಪಟ್ಟು & ರೂ. 3.00 ಲಕ್ಷದವರೆಗಿನ ಸಾಲಕ್ಕೆ	12% 15%
ಸರ್ಕಾರಿ ಆದೇಶ ಸಂಖ್ಯೆ : ಆಇ 1 ಮಕಮು 98 ದಿ : 21.7.1998	ರೂ.1.00 ಲಕ್ಷದವರೆಗಿನ ಸಾಲಕ್ಕೆ ರೂ.1.00 ಲಕ್ಷ ಮೇಲ್ಪಟ್ಟು & ರೂ.3.00 ಲಕ್ಷದವರೆಗಿನ ಸಾಲಕ್ಕೆ	12% 14%
ಸರ್ಕಾರಿ ಆದೇಶ ಸಂಖ್ಯೆ : ಆಇ 41 ಮಕಮು 98 ದಿ: 14.10.1999	ರೂ. 2.00 ಲಕ್ಷದವರೆಗಿನ ಸಾಲಕ್ಕೆ ರೂ. 2,00,001 ರಿಂದ ರೂ. 5,00,000 ಗಳವರೆಗೆ	12% 13%
ಸರ್ಕಾರಿ ಆದೇಶ ಸಂಖ್ಯೆ : ಆಇ 56 ಮಕಮು 99 ದಿ : 4.4.2000	ರೂ.3.00ಲಕ್ಷ ಮೇಲ್ಪಟ್ಟು ಗರಿಷ್ಠ ರೂ.5,00 ಲಕ್ಷಗಳವರೆಗೆ	14%
ಸರ್ಕಾರಿ ಆದೇಶ ಸಂಖ್ಯೆ : ಆಇ 8 ಮಕಮು 98 ದಿ : 8.11.2000	ರೂ.2.00 ಲಕ್ಷದವರೆಗಿನ ಸಾಲಕ್ಕೆ ರೂ. 2,00,001 ರಿಂದ ರೂ. 5,00,000 ಗಳವರೆಗೆ	12% 12.50%
ಸರ್ಕಾರಿ ಆದೇಶ ಸಂಖ್ಯೆ : ಆಇ45 ಮಕಮು 2001 ದಿ : 3.7.2002	ಒಟ್ಟು ಸಂಪೂರ್ಣ ಮೊತ್ತಕ್ಕೆ	10.75%

ಪಿ.ಆರ್.ನಂ. 1482

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ: ಶ್ರೀ ಆರ್. ಬಸವಣ್ಣ. ಹಿಂದಿನ ಸಹಾಯಕ ನಿರ್ದೇಶಕರು (ವಜಾ) ರವರು ಸರ್ಕಾರಿ ಹಣ ದುರುಪಯೋಗ ಪಡಿಸಿಕೊಂಡಿರುವುದನ್ನು ವಸೂಲು ಮಾಡುವ ಬಗ್ಗೆ.

ಓದಲಾಗಿದೆ : **1**. ಕೈಗಾರಿಕಾಭಿವೃದ್ಧಿ ಆಯುಕ್ತರು,ಇವರ ಪತ್ರದ ಸಂಖ್ಯೆ : ಕೈವಾಇ/ ನಿರೀ–2/ ನ್ಯಾ/11/1999–2000, ದಿನಾಂಕ : 06.01.2010.
2. ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರದ ಸಂಖ್ಯೆ : ಕೈವಾಇ/ನಿರೀ–2/ನ್ಯಾ/11/ 1999–2000. ದಿ: 09.03.2010.

ಪ್ರಸ್ತಾವನೆ:

1. ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು ಶ್ರೀ ಆರ್.ಬಸವಣ್ಣ. ಹಿಂದಿನ ಸಹಾಯಕ ನಿರ್ದೇಶಕರು (ವಜಾ) ರವರು ಹುಣಸೂರು ಗ್ರಾಮದಲ್ಲಿ ಹೊಂದಿರುವ ಆಸ್ತಿಯ ವಿವರಗಳನ್ನು ಒದಗಿಸಿರುತ್ತಾರೆ. ಉಪನೋಂದಣಾಧಿಕಾರಿಗಳು, ಟಿ. ನರಸೀಪುರ, ರವರು ದಿನಾಂಕ : 07.12.2009ರ ಪತ್ರದಲ್ಲಿ ಶ್ರೀ ಆರ್.ಬಸವಣ್ಣ. ರವರ ಹೆಸರಿನಲ್ಲಿ ಖಾತೆ ನಂ.53–54 ರಲ್ಲಿ 50ಫಿ45 ಅಳತೆಯುಳ್ಳ ನಿವೇಶನವನ್ನು ಹೊಂದಿರುವುದಾಗಿ ತಿಳಿಸಿ, ಸದರಿ ನಿವೇಶನವನ್ನು ಸರ್ಕಾರಕ್ಕೆ ಅಡಮಾನ ಇಟ್ಟಿರುತ್ತಾರೆಂದು ಹಾಗೂ ಋಣಭಾರಗಳ ಪ್ರಮಾಣ ಪತ್ರದ ಪ್ರತಿಯನ್ನು ಸಹ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಆದುದರಿಂದ ಶ್ರೀ ಆರ್. ಬಸವಣ್ಣ, ಹಿಂದಿನ ಸಹಾಯಕ ನಿರ್ದೇಶಕರು (ವಜಾ) ರವರು ದುರುಪಯೋಗ ಪಡಿಸಿಕೊಂಡಿರುವ ಸರ್ಕಾರದ ಹಣವನ್ನು ಭೂ ಕಂದಾಯ ಬೇಬಾಕಿ ಅಡಿಯಲ್ಲಿ ಕ್ರಮ ವಹಿಸಲು ಜಿಲ್ಲಾಧಿಕಾರಿಗಳು,

ಮೈಸೂರು ಜಿಲ್ಲೆ, ರವರಿಗೆ ಸೂಕ್ತ ನಿರ್ದೇಶನವನ್ನು ನೀಡಲು ಋಣಭಾರ ಪ್ರಮಾಣ ಪತ್ರದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ : (2) ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು 1985 ರಲ್ಲಿ ಶ್ರೀ ಆರ್.ಬಸವಣ್ಣ, ಹಿಂದಿನ ಸಹಾಯಕ ನಿರ್ದೇಶಕರು (ವಜಾ) ರವರು ಸಹಾಯಕ ನಿರ್ದೇಶಕರಾಗಿ ಜಿಲ್ಲಾ ಕೈಗಾರಿಕಾ ಕೇಂದ್ರ. ಧಾರವಾಡದಲ್ಲಿ ಕಾರ್ಯ ನಿರ್ವಹಿಸುತಿದ್ದಾಗ ಸರ್ಕಾರಿ ಹಣ ರೂ. 2.50.900/– (ರೂಪಾಯಿ ಎರಡು ಲಕ್ಷದ ಐವತ್ತು ಸಾವಿರದ ಒಂಭೈನೂರು ಮಾತ್ರ) ಗಳನ್ನು ದುರುಪಯೋಗ ಪಡಿಸಿಕೊಂಡಿರುವ ಹಿನ್ನೆಲೆಯಲ್ಲಿ ಸದರಿಯವರನ್ನು ವಿಚಾರಣೆ ಬಾಕಿ ಇಟ್ಟು ಅಮಾನತ್ತಿನಲ್ಲಿಡಲಾಗಿತ್ತು ಹಾಗೂ ಸದರಿ ಪ್ರಕರಣದ ಬಗ್ಗೆ ಅಂದಿನ ಜಂಟಿ ನಿರ್ದೇಶಕರು, ಧಾರವಾಡ. ರವರು ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಹ ದಾಖಲಿಸಿದ್ದರು.

3. ವಿಚಾರಣೆಯನ್ನು ನಡೆಸಲು ಸರ್ಕಾರಿ ಆದೇಶ ಸಂಖ್ಯೆ : ಸಿಐ 183 ಐಸಿಎಸ್ 85, ದಿನಾಂಕ : 12.03.1991 ರಲ್ಲಿ ವಿಚಾರಣಾಧಿಕಾರಿಯನ್ನಾಗಿ ಶ್ರೀ ಬಿ.ಎನ್. ವಿಜಯಕುಮಾರ್, ಅಧಿಕ ನಿರ್ದೇಶಕರು ಹಾಗೂ ಮಂಡನಾಧಿಕಾರಿಯನ್ನಾಗಿ ಶ್ರೀ ಚಂದ್ರಶೇಖರ್, ಉಪ ನಿರ್ದೇಶಕರು, ಇವರನ್ನು ನೇಮಿಸಲಾಗಿತ್ತು.

4. ತದನಂತರ ಶ್ರೀ. ಆರ್. ಬಸವಣ್ಣರವರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡಿರುವುದರಿಂದ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಮುಂದುವರೆಸಲು ಬರುವುದಿಲ್ಲವೆಂದು ತಿಳಿಸಲಾಗಿದೆ. ಕ್ರಿಮಿನಲ್ ಕೇಸ್ ಸಂಖ್ಯೆ: 59/1988 ಕ್ಕೆ ಸಂಬಂಧಿಸಿದಂತೆ ದಿನಾಂಕ: 22.08.1995 ರ ಆದೇಶದಲ್ಲಿ ಆಪಾದಿತರಿಗೆ ಆರು ತಿಂಗಳುಗಳ ಕಾಲ ಸಾಧಾರಣಾ ಜೈಲು ಶಿಕ್ಷೆ ಮತ್ತು ರೂ. 5,000/– (ರೂಪಾಯಿ ಐದು ಸಾವಿರಗಳು ಮಾತ್ರ) ಗಳ ದಂಡವನ್ನು ವಿಧಿಸಲಾಗಿದೆ. ಸದರಿ ಪ್ರಕರಣದ ಬಗ್ಗೆ ಮೂರನೇ ಅಡಿಷನಲ್ ಸಿವಿಲ್ ಜಡ್ಜ್ ಹಾಗೂ ಸಿ.ಜಿ.ಎಮ್. ಧಾರವಾಡ ನ್ಯಾಯಾಲಯದಲ್ಲಿ ದಾವೆ ಸಂಖ್ಯೆ: 101/1991 ಕ್ಕೆ ಸಂಬಂಧಿಸಿದಂತೆ ದಿನಾಂಕ: 21.10.2000 ರಲ್ಲಿ ಆಪಾದಿತ ನೌಕರರಿಂದ ರೂ. 2,50,900/– (ರೂಪಾಯಿ ಎರಡು ಲಕ್ಷದ ಐವತ್ತು ಸಾವಿರದ ಒಂಬೈನೂರು ಮಾತ್ರ)ಗಳ ಮೊತ್ತವನ್ನು 1985 ರಿಂದ ಪೂರ್ತಿಯಾಗಿ ವಸೂಲು ಆಗುವ ದಿನಾಂಕದವರೆಗೂ ಶೇ. 18ರಂತೆ ಬಡ್ಡಿಯೊಂದಿಗೆ ವಸೂಲು ಮಾಡಲು ತೀರ್ಪು ನೀಡಿರುತ್ತಾರೆ.

5. ಶ್ರೀ ಆರ್. ಬಸವಣ್ಣ ಹಿಂದಿನ ಸಹಾಯಕ ನಿರ್ದೇಶಕರು (ವಜಾ) ಇವರ ವಿರುದ್ಧ ವಿಚಾರಣೆ ನಡೆಸಲು ಪ್ರಕರಣವು ನ್ಯಾಯಾಲಯದಲ್ಲಿ ಇತ್ಯರ್ಥವಾಗಿರುವುದರಿಂದ ಪ್ರಕರಣವನ್ನು ಕೈಬಿಡಲಾಗಿದೆ ಮತ್ತು ಸದರಿಯವರ ಹೆಸರಿನಲ್ಲಿ ಆಸ್ತಿ–ಪಾಸ್ತಿಗಳಿದ್ದ ಪಕ್ಷದಲ್ಲಿ ಅದನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಕ್ರಮ ವಹಿಸಲಾಗಿದೆಯೆಂದು ಕೈಗಾರಿಕಾ ನಿರ್ದೇಶನಾಲಯ ಉಲ್ಲೇಖ (2) ರ ಪತ್ರದಲ್ಲಿ ವರದಿಸಿರುತ್ತದೆ.

6. ಇದಲ್ಲದೆ, ಇಲಾಖೆಯಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಶ್ರೀ ಆರ್. ಬಸವಣ್ಣ, ಹಿಂದಿನ ಸಹಾಯಕ ನಿರ್ದೇಶಕರು (ವಜಾ) ರವರು ಅವರ ಹೆಸರಿನಲ್ಲಿ ಹುಣಸೂರು, ಟಿ. ನರಸೀಪುರ ತಾಲ್ಲೂಕಿನಲ್ಲಿ ಖಾತೆ ನಂಬರ್ 53/54 ರಲ್ಲಿ ಗೃಹ ನಿರ್ಮಾಣ ಮಾಡಲು ರೂ. 14.000/–(ರೂಪಾಯಿ ಹದಿನಾಲ್ಕು ಸಾವಿರ ಮಾತ್ರ) ಗಳನ್ನು ಗೃಹ ಮುಂಗಡವಾಗಿ ಆಸ್ತಿಯನ್ನು ದಿನಾಂಕ: 20.01.1972 ರಂದು ಸರ್ಕಾರಕ್ಕೆ ಅಡವಿಟ್ಟು ಸಾಲವನ್ನು ಪಡೆದಿರುತ್ತಾರೆ. ಈ ಸಾಲದಲ್ಲಿ ಇದುವರೆಗೂ ರೂ. 1,326.00 (ಒಂದು ಸಾವಿರದ ಮುನ್ನೂರ ಇಪ್ಪತ್ತಾರು ರೂಪಾಯಿಗಳು ಮಾತ್ರ) ಗಳನ್ನು ಸರ್ಕಾರಿ ಸೇವೆಯಿಂದ ವಜಾ ಆಗುವವರೆಗೂ ವಸೂಲು ಮಾಡಲಾಗಿರುತ್ತದೆ. ಉಳಿದ ಹಣವನ್ನು ಬಡ್ಡಿ ಸಹಿತ ವಸೂಲಾತಿ ಮಾಡಬೇಕಾಗಿರುತ್ತದೆ. ಸದರಿಯವರು ಸರ್ಕಾರಿ ಆದೇಶ ಸಂಖ್ಯೆ: ವಾಕೈ 183 ಕೈಸೇವಿ 1985,ದಿ: 07.01.1997 ರಲ್ಲಿ ಸರ್ಕಾರಿ ಸೇವೆಯಿಂದ ವಜಾಗೊಳಿಸಲಾಗಿದೆ.

7. ಈ ಬಗ್ಗೆ ಹಿರಿಯ ಉಪನೋಂದಣಾಧಿಕಾರಿ ಟಿ. ನರಸೀಪುರ, ರವರಿಂದ ಮಾಹಿತಿ ಪಡೆಯಲಾಗಿ ಹುಣಸೂರು ಗ್ರಾಮದ ಖಾತೆ ನಂಬರ್ 53/54 ರಲ್ಲಿ 50ಘ45 ಅಳತೆಯ ನಿವೇಶನವನ್ನು ಸರ್ಕಾರಕ್ಕೆ ರೂ.14,000/– ಗಳಿಗೆ ಅಡಮಾನವಿಟ್ಟಿರುವುದಾಗಿ ಹಾಗೂ ಇದುವರೆವಿಗೂ ಈ ಆಸ್ತಿಯ ಮೇಲೆ ಬೇರೆ ಯಾವುದೇ ವಹಿವಾಟು ನಡೆದಿಲ್ಲವೆಂದು ಅವರ ಪತ್ರದ ದಿನಾಂಕ: 07.12.2009 ರಲ್ಲಿ ತಿಳಿಸಿ ಆಸ್ತಿಯ ಮೇಲಿನ ಋಣಭಾರಗಳ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

8. ಆಪಾದಿತ ನೌಕರರಾದ ಶ್ರೀ ಆರ್. ಬಸವಣ್ಣ, ಸಹಾಯಕ ನಿರ್ದೇಶಕರು, ರವರನ್ನು ನ್ಯಾಯಾಲಯದ ತೀರ್ಪನ್ನು ಆಧರಿಸಿ ಸರ್ಕಾರಿ ಆದೇಶ ಸಂಖ್ಯೆ: ವಾಕೈ 183 ಕೈಸೇವಿ 85, ದಿನಾಂಕ: 07.01.1997 ರಲ್ಲಿ ಸರ್ಕಾರಿ ಸೇವೆಯಿಂದ ವಜಾಗೊಳಿಸಲಾಗಿದೆ.

